
# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY




ಸಂಪುಟ:01 Volume:01 • ಸಂಚಿಕೆ:151 Issue:151 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 08.11.2023 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2




**ಮೈಕ್ರೋ ನ್ಯೂಸ್**

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ಹೊಸಪೇಟೆ ನಗರಸಭೆ ವಿಶೇಷ ಸಭೆ ನ.9ಕ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ನಗರಸಭೆಯ ವಿಶೇಷ ಸಭೆಯನ್ನು ನ.9ರಂದು ಬೆಳಿಗ್ಗೆ 11 ಗಂಟೆಗೆ ನಗರಸಭೆಯ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಹೊಸಪೇಟೆ ನಗರಸಭೆ ಅಧ್ಯಕ್ಷೆ ಎ.ಲತಾ ಅವರು ಸಭೆಯ ಅಧ್ಯಕ್ಷತೆ ವಹಿಸುವರು ಎಂದು ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಯೋಜನೆಗಳಡಿ ಸೌಲಭ್ಯಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ 2023-24ನೇ ಸಾಲಿನ ವಿವಿಧ ಯೋಜನೆಗಳಡಿ ಪರಿಶಿಷ್ಟ ಪಂಗಡದ ಅರ್ಹ ಫಲಾಪೇಕ್ಷಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ನೇರಸಾಲ ಯೋಜನೆಯಡಿ ಘಟಕವೆಚ್ಚ ರೂ.1 ಲಕ್ಷಗಳು ಇದರಲ್ಲಿ ಶೇ.50 ನಿಗಮದಿಂದ ಸಾಲ & 50% ಸಹಾಯಧನ. ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆಯಡಿ ಇತರೆ ಚಟುವಟಿಕೆಗಳಿಗಾಗಿ ಗರಿಷ್ಠ ರೂ.1 ಲಕ್ಷ ಸಹಾಯಧನ ಹಾಗೂ ಉಳಿದ ಮೊತ್ತ ಬ್ಯಾಂಕ್‌ನಿಂದ ಸಾಲ. ಮಹಿಳೆಯರಿಗಾಗಿ ಇತರೆ ಚಟುವಟಿಕೆಗಳಿಗಾಗಿ ಗರಿಷ್ಠ ರೂ.2 ಲಕ್ಷ ಸಹಾಯಧನ ಹಾಗೂ ಉಳಿದ ಮೊತ್ತ ಬ್ಯಾಂಕ್‌ನಿಂದ ಸಾಲ. ಸ್ವಾವಲಂಭಿ ಸಾರಥಿ ಯೋಜನೆಯಡಿ ಸರಕು ವಾಹನ ಅಥವಾ ಟ್ಯಾಕ್ಸಿಗಾಗಿ ಗರಿಷ್ಠ ರೂ. 4 ಲಕ್ಷ ಮತ್ತು ಉಳಿದ ಮೊತ್ತ ಬ್ಯಾಂಕ್‌ನಿಂದ ಸಾಲ. ಮೈಕ್ರೋಕ್ರೆಡಿಟ್ (ಪ್ರೇರಣಾ) ಯೋಜನೆಯಡಿ ಕನಿಷ್ಠ 10 ಸದಸ್ಯರಿರುವ ಮಹಿಳಾ ಸ್ವಸಹಾಯ ಸಂಘಗಳಿಗೆ ಗರಿಷ್ಠ ರೂ. 2.50ಲಕ್ಷಗಳು, ಇದರಲ್ಲಿ ರೂ. 1.50 ಲಕ್ಷ ಸಹಾಯಧನ ಮತ್ತು ರೂ. 1 ಲಕ್ಷ ನಿಗಮದಿಂದ ಸಾಲ. ಭೂ ಒಡೆತನ ಯೋಜನೆ ಯಡಿ ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ಕನಿಷ್ಠ 0.20 ಎಕರೆ ಮೇಲ್ಪಟ್ಟು ಘಟಕವೆಚ್ಚದಲ್ಲಿ ಗರಿಷ್ಠ ಎಷ್ಟು ವಿಸ್ತೀರ್ಣ ಬರುತ್ತದೆಯೋ ಅಷ್ಟು ಜಮೀನನ್ನು ಖರೀದಿಸಿ ಕೊಡಲಾಗುವುದು. ಗಂಗಾ ಕಲ್ಯಾಣ ಯೋಜನೆಯಡಿ ಸಣ್ಣ ಮತ್ತು ಅತಿ ಸಣ್ಣ ರೈತರು ಹೊಂದಿರುವ ಖುಷ್ಕಿ ಅಥವಾ ಒಣ ಜಮೀನಿನಲ್ಲಿ ಕೊಳವೆಬಾವಿ ಕೊರೆಸಿ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ನ.29 ಕೊನೆಯ ದಿನವಾಗಿದ್ದು, ಅರ್ಹರು ಬೆಂಗಳೂರು ಓನ್, ಕರ್ನಾಟಕ ಓನ್, ಗ್ರಾಮ ಓನ್ ಸೆಂಟರ್‌ಗಳ ಮುಖಾಂತರ ಸೇವಾಸಿಂಧು ವೆಬ್‌ಸೈಟ್ https://sevasindhuservices.karnataka.gov.in ನಲ್ಲಿ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ (ನಿ), ಕೊಠಡಿ ಸಂಖ್ಯೆ: 05, ಮೊದಲನೇ ಮಹಡಿ, ತಾಲ್ಲೂಕು ಕಚೇರಿ ಕಟ್ಟಡ, ಹೊಸಪೇಟೆ, ಇಲ್ಲಿಗೆ ಸಂಪರ್ಕಿಸಬಹುದಾಗಿದೆ ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಾಲಾವಧಿಯ ಕಲಿಕೆ ಬದುಕಿನುದ್ದಕ್ಕೂ ಇರಲಿ

## ಶಾಸಕ ನೇಮಿರಾಜ ನಾಯ್ಕ ಹೇಳಿಕೆ | ಸ್ವಚ್ಛತಾ ಕಾರ್ಯದಲ್ಲಿ ಜಾಬ್ ಕಾರ್ಡುದಾರರು ಪಾಲ್ಗೊಳ್ಳುವುದು ಕಡ್ಡಾಯ





ಗ್ರಾಮ ಪಂಚಾಯತಿಗಳಲ್ಲಿ ಮನರೆಗಾ ಜಾಬ್ ಕಾರ್ಡುಗಳನ್ನು ಹೊಂದಿದವರು ಪ್ರತಿ ತಿಂಗಳು ಎರಡು ದಿನ ತಮ್ಮ ಗ್ರಾಮಗಳಲ್ಲಿ ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು, ಸದ್ಯದಲ್ಲಿ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ಜಾಬ್ ಕಾರ್ಡು ಹೊಂದಿದವರು ಕಡ್ಡಾಯವಾಗಿ ಭಾಗಿಯಾಗ ಬೇಕು ಇಲ್ಲದಿದ್ದರೆ ಅಂತಹವರ ಜಾಬ್ ಕಾರ್ಡು ರದ್ದುಗೊಳಿಸಲಾಗುವುದು.

| **ನೇಮಿರಾಜನಾಯ್ಕ** ಶಾಸಕ.

**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ವಿದ್ಯಾರ್ಥಿ ಜೀವನದಲ್ಲೇ ಸೇವಾ ಮನೋಭಾವ ಬೆಳೆಸಿಕೊಂಡು ಸಮಾಜಮುಖಿ ಗುಣಗಳನ್ನು ಅಳವಡಿಸಿಕೊಳ್ಳಲು ಎನ್.ಎಸ್.ಎಸ್ ಶಿಬಿರಗಳು ಪೂರಕವಾಗಿವೆ ಎಂದು ಹ.ಬೊ.ಹಳ್ಳಿ ಶಾಸಕ ನೇಮಿರಾಜ್ ನಾಯ್ಕ್ ಹೇಳಿದರು.

ಸಮೀಪದ ಡಣಾಪುರ ಗ್ರಾಮದಲ್ಲಿ, ಪಟ್ಟಣದ ಪ್ರಿಯದರ್ಶಿನಿ ಸ್ವ.ಪ.ಪೂ.ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದಿಂದದ ಹಮ್ಮಿಕೊಂಡ ವಿಶೇಷ ವಾರ್ಷಿಕ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಪೋಷಕರ ಪರಿಶ್ರಮಕ್ಕೆ ನೀವು ಪ್ರತಿಫಲದ ರೂಪದಲ್ಲಿ ನಿಮ್ಮ ಚಾರಿತ್ರ್ಯ ನಿರ್ಮಾಣ ಮಾಡಿಕೊಳ್ಳುವ ಕಾರ್ಯ ನಿಮ್ಮಿಂದಾಗಲಿ. ಶಿಬಿರದ ಮೂಲಕ ಉತ್ತಮ ಚಾರಿತ್ರ್ಯದೊಂದಿಗೆ ವಿದ್ಯಾಭ್ಯಾಸ ಪಡೆದು ಪೋಷಕರ ಹಾಗೂ ಕಾಲೇಜಿನ ಕೀರ್ತಿಯನ್ನು ಬೆಳಗಿಸಿ ಎಂದರು.

ಗ್ರಾಮ ನೈರ್ಮಲ್ಯದ ಕುರಿತು ಮಾನ್ಯ ಪ್ರಧಾನ ಮಂತ್ರಿಯವರ ಕನಸು ಕೂಡ ಇದೇ ಆಗಿದೆ. ಅದನ್ನು ಈ ಎನ್‌ಎಸ್‌ಎಸ್ ಶಿಬಿರದ ಮೂಲಕ ಸಾಕಾರಗೊಳಿಸೋಣ. ನಿಮ್ಮ ಶಿಕ್ಷಣದ ಸಾಧನೆಯೊಂದಿಗೆ ಈ ಶಿಬಿರದ ಸೇವಾ ಭಾವನೆಯೊಂದಿಗೆ ಉತ್ತಮ ಫಲಿತಾಂಶವನ್ನು ಪಡೆದು ಕಾಲೇಜು ಹಾಗೂ ಪೋಷಕರಿಗೆ ಕೀರ್ತಿಯನ್ನು ತರುವ ಸಂಕಲ್ಪ ಮಾಡಿ ಎಂದರು. ಕಾಲೇಜಿನ ಪ್ರಾಚಾರ್ಯ ಎಂ.ಅಶೋಕ ಸಭೆಯ ಅಧ್ಯಕತೆವಹಿಸಿದ್ದರು. ಈ ಸಂಧರ್ಭದಲ್ಲಿ ಡಣಾಪುರ ಗ್ರಾ.ಪಂ.ಅಧ್ಯಕ್ಷ ಹೆಚ್. ಮಲ್ಲೇಶ್, ಕಾರ್ಯದರ್ಶಿ ನೀರಳ್ಳಿ ಮಂಜುನಾಥ ಉಪನ್ಯಾಸಕ ಸೋಮಪ್ಪ ಶಿಬಿರಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಶಿಬಿರಾಧಿಕಾರಿ ಪಿ.ರಾಮಚಂದ್ರ, ಸಹಶಿಬಿರಾಧಿಕಾರಿ ಆರ್.ಪುಷ್ಪಾ ಸೇರಿದಂತೆ ಇತರರಿದ್ದರು.

# ಕುಡಿಯುವ ನೀರು ಪೂರೈಕೆಗಿಲ್ಲ ಹಣದ ಕೊರತೆ

## ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಹಣ ಲಭ್ಯವಿದೆ | 11 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ
## ಕಂದಾಯ ಸಚಿವ ಕೃಷ್ಣ ಬೈರೇಗೌಡ ಕೊಪ್ಪಳ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಹೇಳಿಕೆ




ಕುಡಿಯುವ ನೀರಿಗೆ ಈಗಾಗಲೇ ಸರ್ಕಾರ ಹಣ ಬಿಡುಗಡೆ ಮಾಡಿದೆ. ಪ್ರಕೃತಿ ವಿಕೋಪದ ಪರಿಹಾರ ಕ್ರಮಕ್ಕಾಗಿ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಅಗತ್ಯ ಪ್ರಮಾಣದಲ್ಲಿ ಹಣ ಲಭ್ಯವಿದೆ. ಕಳೆದ ವಾರ 11 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನೆರಡು ವಾರದೊಳಗೆ ತಲಾ 50 ಲಕ್ಷ ರೂ.ಗಳನ್ನು ಆಯಾ ತಾಲೂಕುಗಳಿಗೆ ನೀಡಲಾಗುವುದು. ಸದ್ಯಕ್ಕೆ ಕುಡಿಯುವ ನೀರಿನ ಸಮಸ್ಯೆ ಎಲ್ಲು ಸಹ ಕಂಡು ಬಂದಿಲ್ಲ. ಸಮಸ್ಯೆ ಕಂಡು ಬಂದಲ್ಲಿ ಖಾಸಗಿ ಬೋರವೆಲ್‌ಗಳನ್ನು ಬಾಡಿಗೆ ಪಡೆದುಕೊಳ್ಳಲು ಮತ್ತು ಟ್ಯಾಂಕರ್ ಮೂಲಕ ನೀರು ಪೂರೈಸಲು ಅನುದಾನ ಬಳಸಬಹುದಾಗಿದೆ.

| **ಕೃಷ್ಣ ಬೈರೇಗೌಡ,** ಕಂದಾಯ ಸಚಿವರು

**ಹಂಪಿ ಟೈಮ್ಸ್ ಕೊಪ್ಪಳ**

ಕಂದಾಯ ಇಲಾಖೆಯ ಸಚಿವರಾದ ಕೃಷ್ಣ ಬೈರೇಗೌಡ ಅವರು ನವೆಂಬರ್ 7ರಂದ ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಕಂದಾಯ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಮಳೆ ಬಾರದೇ ಇರುವುದರಿಂದ ಯಾವುದೇ ಕಡೆಗಳಲ್ಲಿ ನೀರಿನ ಸಮಸ್ಯೆಗಳು ಕಂಡು ಬಂದಲ್ಲಿ ಅಂತಹ ಕಡೆ 24 ಗಂಟೆಯೊಳಗಡೆ ನೀರು ಪೂರೈಕೆ ಮಾಡುವ ಹಾಗೆ ಎಲ್ಲ ಸಿದ್ಧತೆಗಳನ್ನು ಈಗಿನಿಂದಲೇ ಮಾಡಿಕೊಳ್ಳಬೇಕು. ಸಮಸ್ಯೆ ಉದ್ಭವವಾಗುವ ಮೊದಲೇ ಗ್ರಾಮ ಪಂಚಾಯತ್ ಮಟ್ಟದಲ್ಲಿ ಕಂದಾಯ, ಆರ್‌ಡಿಪಿಆರ್ ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಅಧಿಕಾರಿಗಳನ್ನೊಳಗೊಂಡು ಒಂದು ಟಾಸ್ಕ ಪೋರ್ಸ್ ಮಾಡಬೇಕು. ಮುಂಜಾಗ್ರತಾ ಕ್ರಮವಾಗಿ ಗ್ರಾಮವಾರು ಸಮಸ್ಯೆ ತಲೆದೋರಬಹುದಾದ ಗ್ರಾಮಗಳನ್ನು ಪಟ್ಟಿ ಮಾಡಬೇಕು. ಟ್ಯಾಂಕರ್ ಪೂರೈಕೆಗೆ ಟೆಂಡರ್ ಪ್ರಕ್ರಿಯೆ ಮತ್ತು ಖಾಸಗಿ ಬೋರವೆಲ್ ಗುರುತಿಸಿ ಸಿದ್ಧತೆಯಲ್ಲಿರಬೇಕು. ಖಾಸಗಿ ಬೋರವೆಲ್‌ದಿಂದ ಪೈಪಲೈನ್ ಮಾಡುವಂತಹ ಕಡೆಗೆ ಅದಕ್ಕೆ ತಗುಲುವ ವೆಚ್ಚದ ಬಗ್ಗೆ ಪ್ರಸ್ತಾವನೆ ಸಿದ್ಧಪಡಿಸಿ ಸಿದ್ಧತೆಯಲ್ಲಿರಬೇಕು. ಈ ವಿಷಯದಲ್ಲಿ ತಹಸೀಲ್ದಾರರು, ಪಿಡಿಓ ಮತ್ತು ಗ್ರಾಮ ಆಡಳಿತ ಅಧಿಕಾರಿಗಳು ಹೆಚ್ಚಿನ ಮುತುವರ್ಜಿ ವಹಿಸಬೇಕು ಎಂದರು.

ಫ್ರೂಟ್ಸ್ ಡೇಟಾಬೇಸ್‌ನಲ್ಲಿ ರೈತರ ಹೆಸರು, ಆಧಾರ್ ಮಾಹಿತಿಯ ನೋಂದಣಿ ಇದೆ. ಇದರಲ್ಲಿ ರೈತರ ಜಮೀನಿನ ಸಂಪೂರ್ಣ ವಿಸ್ತೀರ್ಣ ಕೂಡ ಇರಬೇಕು. ಎಷ್ಟು ಪ್ರಮಾಣದ ವಿಸ್ತೀರ್ಣದ ಮಾಹಿತಿ ಇರುತ್ತದವೋ ಅಷ್ಟಕ್ಕೆ ಮಾತ್ರ ಪರಿಹಾರ ಸಿಗುತ್ತದೆ. ಇಲ್ಲದಿದ್ದಲ್ಲಿ ಪೂರ್ಣ ಪ್ರಮಾಣದಲ್ಲಿ ಪರಿಹಾರ ಸಿಗುವುದಿಲ್ಲ. ಈಗ ಶೇ.65ರಷ್ಟು ಮಾತ್ರ ವಿಸ್ತೀರ್ಣದ ವಿವರ ದಾಖಲಾಗಿದೆ. ಇನ್ನು ಶೇ.35ರಷ್ಟು ವಿಸ್ತೀರ್ಣ ಸೇರಿಸುವುದು ಬಾಕಿ ಇದೆ. ಈ ಬಾಕಿ ವಿಸ್ತೀರ್ಣದ ವಿವರವನ್ನು ಫ್ರೂಟ್ ಡೇಟಾಬೇಸನಲ್ಲಿ ಸೇರಿಸುವ ಕಾರ್ಯವನ್ನು ಕಂದಾಯ, ಕೃಷಿ, ತೋಟಗಾರಿಕೆ, ರೇಷ್ಮೆ, ಆರ್‌ಡಿಪಿಆರ್ ಸೇರಿದಂತೆ ವಿವಿಧ ಇಲಾಖೆಗಳು ಒಗ್ಗೂಡಿ ವಾರದೊಳಗಡೆ ಅಭಿಯಾನ ಮಾದರಿಯಲ್ಲಿ ನಡೆಸಬೇಕು ಎಂದು ಇದೆ ವೇಳೆ ಸಚಿವರು ಅಧಿಕಾರಿಗಳಿಗೆ

>> 2

## ವೃತ್ತಿರಂಗಭೂಮಿ ಧನಸಹಾಯ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2023-24ನೇ ಸಾಲಿಗೆ ವೃತ್ತಿರಂಗಭೂಮಿ ಕಾಯಕಲ್ಪ ಯೋಜನೆಯಡಿ ಧನಸಹಾಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.ಕನಿಷ್ಠ 5 ವರ್ಷಗಳ ನೋಂದಾಯಿತ ವೃತ್ತಿ ನಾಟಕ ಕಂಪನಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅರ್ಜಿ ನಮೂನೆಗಳು ವೆಬ್‌ಸೈಟ್ www.kannadasiri.karnataka.gov.in ಗೆ ಭೇಟಿ ನೀಡಿ ಪಡೆದುಕೊಳ್ಳಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಟಿ.ಹೊನ್ನುರಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




# ಸದ್ದಿಲ್ಲದೆ ನಡೆದಿದೆ ಅಧ್ಯಕ್ಷ ಗಾದಿಗೆ ಪೈಪೋಟಿ

## ಇಂದು ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ | ಮಧ್ಯಾಹ್ನ 2.30ಕ್ಕೆ ಫಲಿತಾಂಶ

**ಹಂಪಿ ಟೈಮ್ಸ್ ಹೊಸಪೇಟೆ:**

ಬಿಡಿಸಿಸಿ ಬ್ಯಾಂಕ್ ನೂತನ ಅಧ್ಯಕ್ಷ ಗಾದಿಗೆ ಘಟಾನುಘಟಿಗಳಿಂದ ತೆರೆಮರೆಯಲ್ಲಿ ಕಸರತ್ತು ನಡೆದಿದೆ. ಸಹಕಾರಿ ಕ್ಷೇತ್ರ ರಾಜಕೀಯವಾಗಿಲ್ಲದಿದ್ದರೂ ಆಡಳಿತ ಮಂಡಳಿಗೆ ಆಯ್ಕೆಯಾಗಿರುವ ಬಹುತೇಕ ನಿರ್ದೇಶಕರು ಕಾಂಗ್ರೆಸ್ ಪಕ್ಷಕ್ಕೆ ಸೇರಿದ ನಾಯಕರಾಗಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರವಿರುವುದರಿಂದ ಅಧ್ಯಕ್ಷ ಗಾದಿ ಕಾಂಗ್ರೆಸ್ಸಿನ ನಿರ್ದೇಶಕರಿಗೆ ದೊರೆಯಬೇಕೆಂಬ ಚೆಂಡು ಇದೀಗ ಸಿಎಂ ಅಂಗಳಕ್ಕೆಸೆದಿದ್ದಾರೆ. ಸಿಎಂ ಕೃಪಾಕಟಾಕ್ಷವಿದ್ದವರೂ ಅಧ್ಯಕ್ಷರಾಗುವ ಸಾಧ್ಯತೆಗಳೇ ಹೆಚ್ಚಿವೆ ಎಂಬ ಮಾತುಗಳು ದಟ್ಟವಾಗಿ ಕೇಳಿಬಂದಿವೆಯಾದರೂ, ಪೈಪೋಟಿಗಿಳಿದವರನ್ನು ಬಿಟ್ಟು ಬೇರೆಯವರೇ ಅಧ್ಯಕ್ಷರಾಗುತ್ತಾರೆ ಎಂಬ ಮಾತುಗಳೂ ಸಹ ಹರಿದಾಡುತ್ತಿವೆ.

ನೂತನ ನಿರ್ದೇಶಕರಾಗಿ ಆಯ್ಕೆಯಾಗಿರುವ ಹಾಲಿ ಶಾಸಕರು, ಬಿಡಿಸಿಸಿ ಬ್ಯಾಂಕ್‌ನ ಮಾಜಿ ಉಪಾಧ್ಯಕ್ಷರ ಜತೆಗೆ ಹೊಸಬರೂ ಅಧ್ಯಕ್ಷ ಸ್ಥಾನಕ್ಕೆ



ಪೈಪೋಟಿಗಿಳಿರುವುದು ಕುತೂಹಲ ಮೂಡಿಸಿದೆ. ಶತಮಾನದ ಸಂಭ್ರಮ ಕಂಡಿರುವ ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಆಡಳಿತ ಮಂಡಳಿಯ ನಿರ್ದೇಶಕರ ಆಯ್ಕೆ ಅ.15 ರಂದು ಚುನಾವಣೆಯಾಗಿದ್ದು, ನ.8 ರಂದು ಅಧ್ಯಕ್ಷರ ಆಯ್ಕೆಗೆ ಚುನಾವಣೆ ನಿಗದಿಯಾಗಿದೆ. ನೂತನ ನಿರ್ದೇಶಕರಲ್ಲಿ ಬಹುತೇಕರಿಗೆ ಸಾರ್ವತ್ರಿಕ ಜೀವನ, ಸಹಕಾರ ರಂಗದ ಬಗೆಗಿನ ಕಳಕಳಿ, ಅನುಭವ, ರಾಜಕೀಯ ಹಿನ್ನೆಲೆ ಹೆಚ್ಚೂ ಕಡಿಮೆ ಸಮಾನವಾಗಿದೆ. ಅಧ್ಯಕ್ಷ ಗಾದಿಗೇರಲು ರಣತಂತ್ರ ರೂಪಿಸಿದ್ದಾರೆ.

**ಪ್ರಮುಖ ಆಕಾಂಕ್ಷಿಗಳು ಯಾರು?**

ನೂತನ ನಿರ್ದೇಶಕರ ಪೈಕಿ ಹರಪನಹಳ್ಳಿ ಶಾಸಕಿ ಎಂ.ಪಿ.ಲತಾ, ಬ್ಯಾಂಕ್‌ನ ಮಾಜಿ ಉಪಾಧ್ಯಕ್ಷ ಜಿ.ತಿಪ್ಪೇಸ್ವಾಮಿ, ಮಾಜಿ ಅಧ್ಯಕ್ಷ ಚೊಕ್ಕ ಬಸವನಗೌಡ, ಐಗೋಳ ಚಿದಾನಂದ ಹೆಸರು ಪ್ರಮುಖವಾಗಿವೆ. ಜತೆಗೆ ಇದೇ ಮೊದಲ ಬಾರಿಗೆ ಆಯ್ಕೆಯಾಗಿರುವ ಸಂಸದ ವೈ. ದೇವೇಂದ್ರ ಅವರ ಪುತ್ರ ವೈ.ಡಿ.ಅಣ್ಣಪ್ಪ, ಮಾಜಿ ಸಚಿವ ಆನಂದ ಸಿಂಗ್ ಸಂಬಂಧಿ ಸಂದೀಪ ಸಿಂಗ್ ಸೇರಿದಂತೆ ಇತರರು ತೆರೆಮರೆಯಲ್ಲಿ ಕಸರತ್ತು ನಡೆಸಿದ್ದಾರೆ. ಸಹಕಾರ ರಂಗದಲ್ಲಿರುವ ತಮ್ಮ ವರ್ಚಸ್ಸು, ಆತ್ಮೀಯತೆ, ಬಾಂಧವ್ಯ ಮೇಲೆ ನಿರ್ದೇಶಕರನ್ನು ಸೆಳೆಯುತ್ತಿದ್ದಾರೆ ಎನ್ನಲಾಗಿದೆ.

**ಸಿಎಂ ಭೇಟಿಯಾದ ಶಾಸಕಿ ಲತಾ:**

ಸಹೋದರ ಮಾಜಿ ಶಾಸಕ ದಿ.ಎಂ.ಪಿ. ರವೀಂದ್ರ ಅವರ ಆಡಳಿತವನ್ನು ಬ್ಯಾಂಕ್‌ನಲ್ಲಿ ಮರು ಪ್ರತಿಷ್ಠಾಪಿಸುವ ಸಂಕಲ್ಪದಿಂದ ನಿರ್ದೇಶಕರಾಗಿ ಆಯ್ಕೆಯಾಗಿರುವ ಎಂ.ಪಿ.ಲತಾ ಮಲ್ಲಿಕಾರ್ಜುನ ಅಧ್ಯಕ್ಷರಾಗಲು ತೀವ್ರ ಪ್ರಯತ್ನ ನಡೆಸಿದ್ದಾರೆ. ಇತ್ತೀಚೆಗೆ ಜಿಲ್ಲೆಗೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಭೇಟಿ ಮಾಡಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಕಾರ್ಯಗಳ ಚರ್ಚೆಯ ಜತೆಗೆ ಬಿಡಿಸಿಸಿ ಚುನಾವಣೆಯನ್ನೂ ಪ್ರಸ್ತಾಪಿಸಿದ್ದಾರೆ. ಬಿಡಿಸಿಸಿ ಅಧ್ಯಕ್ಷ ಗಾದಿಗೇರಲು ನೆರವಾಗುವಂತೆ ಶಾಸಕಿ ಎಂ.ಪಿ.ಲತಾ ಮನವಿ ಮಾಡಿದ್ದಾರೆ.

**ಭೀಮಾನಾಯ್ಕ ಸ್ಪರ್ಧೆ ಅನುಮಾನ:** ಸಹಕಾರ ಇಲಾಖೆ ನಿಯಮದಂತೆ ಒಂದೇ ಉದ್ದೇಶ ಹೊಂದಿರುವ ಎರಡಕ್ಕಿಂತ ಹೆಚ್ಚು ಸಹಕಾರ ಸಂಸ್ಥೆಗಳಲ್ಲಿ ಅಧ್ಯಕ್ಷರಾಗುವಂತಿಲ್ಲ. ಈಗಾಗಲೇ ಕೆಎಂಎಫ್ ರಾಯಚೂರು, ಬಳ್ಳಾರಿ, ಕೊಪ್ಪಳ, ವಿಜಯನಗರ ಜಿಲ್ಲಾ ಸಹಕಾರ ಒಕ್ಕೂಟ ಮತ್ತು ಕರ್ನಾಟಕ ಹಾಲು ಉತ್ಪಾದಕರ ಮಹಾ ಮಂಡಳ ಅಧ್ಯಕ್ಷರಾಗಿರುವ ಭೀಮಾನಾಯ್ಕ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದು ಅನುಮಾನ ಎಂಬ ಮಾತಿದೆ. ಮಧ್ಯಾಹ್ನಕ್ಕೆಲ್ಲ ಚಿತ್ರಣ ಬಯಲಾಗಲಿದೆ.

ಹಂಪಿ ಟೈಮ್ಸ್ HAMPI TIMES

## ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ: ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಿ

**ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತಕ ಸಾಲಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ಹಿಂಗಾರು ಹಾಗೂ ಬೇಸಿಗೆ ಹಂಗಾಮಿನ ಬೆಳೆ ವಿಮೆಗೆ ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರು ತಮ್ಮ ಬೆಳೆಗಳಿಗೆ ಬ್ಯಾಂಕುಗಳಲ್ಲಿ ವಿಮೆಗೆ ನೋಂದಾಯಿಸಿಕೊಳ್ಳಬೇಕು ಎಂದು ಜಂಟಿ ಕೃಷಿ ನಿರ್ದೇಶಕ ಕೆ.ಮಲ್ಲಿಕಾರ್ಜುನ ಅವರು ತಿಳಿಸಿದ್ದಾರೆ.

ಹಿಂಗಾರು ಹಂಗಾಮಿನ ಗ್ರಾಮ ಪಂಚಾಯಿತಿ ಮಟ್ಟದ ನೀರಾವರಿ ಬೆಳೆಗಳಾದ ಜೋಳ, ಕಡಲೆ (ಮಳೆಯಾಶ್ರಿತ) ಹಾಗೂ ಬೇಸಿಗೆ ಹಂಗಾಮಿನ ಗ್ರಾಮ ಪಂಚಾಯಿತಿ ಮಟ್ಟದ ಬೆಳೆಗಳಾದ ನೆಲಗಡಲೆ (ಶೇಂಗಾ), ಭತ್ತ.

ಹೋಬಳಿ ಮಟ್ಟದ ಹಿಂಗಾರು ಹಂಗಾಮಿನ ನೀರಾವರಿ ಬೆಳೆಗಳಾದ ಮುಸುಕಿನ ಜೋಳ, ಸೂರ್ಯಕಾಂತಿ, ಈರುಳ್ಳಿ ಹಾಗೂ ಮಳೆಯಾಶ್ರಿತ ಬೆಳೆಗಳಾದ ಜೋಳ, ಹುರುಳಿ, ಸೂರ್ಯಕಾಂತಿ, ಕುಸುಮೆ ಮತ್ತು ಬೇಸಿಗೆ ಹಂಗಾಮಿನ ನೀರಾವರಿ ಬೆಳೆಗಳಾದ ಸೂರ್ಯಕಾಂತಿ, ಈರುಳ್ಳಿ ಬೆಳೆಗಳು ಈ ಜಿಲ್ಲೆಯ ಬೆಳೆಗಳಾಗಿದ್ದು, ನಿಗದಿತ ಅವಧಿಯೊಳಗೆ ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಬಹುದಾಗಿದೆ.

**ಬೆಳೆ ವಿಮೆ: ವಿವಿಧ ಬೆಳೆಗಳಿಗೆ ಕೊನೆಯ ದಿನಾಂಕ**

ಹಿಂಗಾರು ಹಂಗಾಮಿನ ನೀರಾವರಿ ಬೆಳೆಗಳಾದ ಜೋಳ, ಕಡಲೆ ಬೆಳೆಗಳಿಗೆ ಈ ಸಾಲಿನ ಡಿ.30, ಮಳೆಯಾಶ್ರಿತ ಬೆಳೆ ಜೋಳ ನ.15, ಮುಸುಕಿನ ಜೋಳ, ಸೂರ್ಯಕಾಂತಿ, ಕುಸುಮೆ ಬೆಳೆಗಳಿಗೆ ಡಿ.15, ಕಡಲೆ ಬೆಳೆಗೆ ಡಿ.30, ಈರುಳ್ಳಿ, ಹುರುಳಿ ಬೆಳೆಗೆ ಡಿ.01. ಬೇಸಿಗೆ ಬೆಳೆಗಳಾದ ಭತ್ತ, ನೆಲಗಡಲೆ (ಶೇಂಗಾ), ಸೂರ್ಯಕಾಂತಿ, ಈರುಳ್ಳಿ ಬೆಳೆಗಳಿಗೆ ವಿಮೆಗೆ ನೋಂದಾಯಿಸಿಕೊಳ್ಳಲು 2024 ಫೆ.28 ಕೊನೆಯ ದಿನಾಂಕಗಳಾಗಿವೆ. ಈ ವಿಮೆ ಯೋಜನೆಯ ಲಾಭ ಪಡೆಯಲು ಯಾವುದೇ ಸ್ಥಳೀಯ ಬ್ಯಾಂಕ್‌ಗಳು ಹಾಗೂ ಸಾರ್ವಜನಿಕ ಸೇವಾ ಕೇಂದ್ರಗಳನ್ನು (ಕಾಮನ್ ಸರ್ವೀಸ್ ಸೆಂಟರ್ಸ್) ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಹಾಗೂ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಭೇಟಿ ನೀಡಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬೀದಿಬದಿ ವ್ಯಾಪರಸ್ಥರ ಗುರುತಿನ ಚೀಟಿಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕುಡುತಿನಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ದೀನ್ ದಯಾಳ್ ಅಂತ್ಯೋದಯ ಯೋಜನೆ ಮತ್ತು ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಯೋಜನೆಯಡಿಯಲ್ಲಿ 2023-24ನೇ ಸಾಲಿನ ಸ್ವಯಂ ಉದ್ಯೋಗದ ವ್ಯಕ್ತಿಗತ ಉದ್ಯಮಶೀಲತೆ (ಸಾಲ ಮತ್ತು ಸಹಾಯಧನ) ಯೋಜನೆಯಡಿ ಸ್ವಯಂ ಉದ್ಯೋಗ ಕೈಗೊಳ್ಳುವ ಸಂಘ ಹಾಗೂ ಬೀದಿಬದಿ ವ್ಯಾಪರಸ್ಥರು ಗುರುತಿನ ಚೀಟಿ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಸ್ವಯಂ ಉದ್ಯೋಗ ಕೈಗೊಳ್ಳುವ ಆಸಕ್ತಿ ಇರುವ ಸ್ವ-ಸಹಾಯ ಗುಂಪಿನಲ್ಲಿ ಸದಸ್ಯರಿರುವ ಕುಟುಂಬದ ಅರ್ಹ ಫಲಾನುಭವಿಗಳಿಂದ ಗುಂಪು ಉದ್ದಿಮೆ ಶೀಲತೆ (ಸಾಲ ಮತ್ತು ಸಹಾಯಧನ) ಚಟುವಟಿಕೆಗಳ ಅಡಿ ಸ್ವಯಂ ಉದ್ಯೋಗ ಕೈಗೊಳ್ಳುವ ಮಹಿಳಾ ಸ್ವ-ಸಹಾಯ ಗುಂಪು ಹಾಗೂ ಪ್ರದೇಶ ಮಟ್ಟದ ಒಕ್ಕೂಟವನ್ನು ರಚಿಸಲು ಆಸಕ್ತಿ ಹೊಂದಿದ ಅರ್ಹ ಫಲಾನುಭವಿಗಳು ಅಥವಾ ಗುಂಪುಗಳು ಮತ್ತು ಬೀದಿಬದಿ ವ್ಯಾಪಾರಿಗಳು ಗುರುತಿನ ಚೀಟಿಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸುವ ಫಲಾನುಭವಿಗಳು ಕುಡುತಿನಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ನಿವಾಸಿಯಾಗಿದ್ದು, ಬಡತನ ರೇಖೆ ಕೆಳಗಿನ ಕುಟುಂಬದವರಾಗಿರಬೇಕು. ರೇಷನ್ ಕಾರ್ಡ್, ಆಧಾರ್‌ಕಾರ್ಡ್, ಮತದಾರರ ಗುರುತಿನ ಚೀಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವಿದ್ಯಾರ್ಹತೆ ಪ್ರಮಾಣ ಪತ್ರ, ಎರಡು ಭಾವಚಿತ್ರಗಳು, ಸ್ವಯಂಉದ್ಯೋಗದ ಬಗ್ಗೆ ಭಾವಚಿತ್ರ, ಗುಂಪಿಗೆ ಸಂಬಂಧಿಸಿದ ದಾಖಲೆಗಳು, ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್, ಅಂಗವಿಕಲರಿದ್ದಲ್ಲಿ ಪ್ರಮಾಣ ಪತ್ರ ಸಲ್ಲಿಸಬೇಕು.

ಅರ್ಜಿ ಸಲ್ಲಿಸಲು ನವೆಂಬರ್ 27 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕುಡುತಿನಿ ಪಟ್ಟಣ ಪಂಚಾಯಿತಿ ಕಾರ್ಯಾಲಯ ಹಾಗೂ ದೂ.08392-248025ಗೆ ಸಂಪರ್ಕಿಸಬಹುದು ಎಂದು ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com

# ಆಟಕ್ಕೂ, ಪಾಠಕ್ಕೂ ಸೈನಾ

## ಹೆಣ್ಣು ಮಕ್ಕಳ ಪಾಲಿನ ಆಶಾಕಿರಣ ನೆಹ್ವಾಲ್





ವಿಶ್ವದ ನಂಬರ್ ಒನ್ ಬ್ಯಾಡ್ಮಿಂಟನ್ ಆಟಗಾರ್ತಿಯ ಹಿರಿಮೆ, 24ಕ್ಕೂ ಹೆಚ್ಚು ಟೈಟಲ್ ಗಳನ್ನು ಗೆದ್ದ ಭಾರತದ ಏಕೈಕ ಆಟಗಾರ್ತಿ ಎಂಬ ಗರಿ. ಇಡೀ ಜಗತ್ತು ಭಾರತದಡೆ ತಿರುಗಿ ನೋಡುವಂತೆ ಮಾಡಿದ ಮೊದಲ ಬ್ಯಾಡ್ಮಿಂಟನ್ ಆಟಗಾರ್ತಿ. ಕೇವಲ ಮನೆ ಕೆಲಸ, ಮದುವೆ, ಮಕ್ಕಳು ಎಂದು ಮಾತ್ರ ಯೋಚಿಸುತ್ತಿದ್ದ ಭಾರತೀಯ ಮಾನಸಿಕತೆಯನ್ನು ಪಲ್ಲಟಗೊಳಿಸಿದಾಕೆ. ಹೆಣ್ಣು ಮಕ್ಕಳು ನೌಕರಿಯ ಹೊರತಾಗಿಯೂ ಅವಕಾಶ ಕೊಟ್ಟಾಗ ಏನನ್ನಾದರೂ ಸಾಧಿಸಬಲ್ಲರು ಎಂಬುದಕ್ಕೆ ಉದಾಹರಣೆಯಾಗಿ ನಿಂತಾಕೆ ಹರಿಯಾಣದ ಮನೆ ಮಗಳು.... ಆಂಧ್ರಪ್ರದೇಶದ ಸಾಕು ಪುತ್ರಿ ಸೈನಾ ನೆಹ್ವಾಲ್.

ಹುಟ್ಟಿದ್ದು ಮಾರ್ಚ್ 17, 1990 ಹರಿಯಾಣದ ಹಿಸ್ಸಾರ್ ನಲ್ಲಿ. ತಾಯಿ ಉಷಾರಾಣಿ ಮತ್ತು ತಂದೆ ಹರ್ವೀರ್ ಪಾಲ್ ನೆಹ್ವಾಲ್. ಓರ್ವ ಸಹೋದರಿ. ತಂದೆ ತಾಯಿ ಇಬ್ಬರೂ ಕೂಡ ಬ್ಯಾಡ್ಮಿಂಟನ್ ಆಟಗಾರರಾಗಿದ್ದು, ತಾಯಿಯ ಅದಮ್ಯ ಆಶಯ ಮಗಳು ಸೈನಾಳನ್ನು ಬ್ಯಾಡ್ಮಿಂಟನ್ ಆಟಗಾರ್ತಿಯನ್ನಾಗಿ ನೋಡುವುದು ಇದಕ್ಕೆ ತಂದೆಯ ಒತ್ತಾಸೆ ಕೂಡ ಇತ್ತು. ಪ್ರಾರಂಭದಲ್ಲಿ ತಂದೆ ತಾಯಿಯೇ ಮಗಳಿಗೆ ಬ್ಯಾಡ್ಮಿಂಟನ್ ನ ಪಾಠ ಪ್ರಾರಂಭಿಸಿದ್ದರು. ಸೈನಾ 8 ವರ್ಷದವಳಿದ್ದಾಗ ತಂದೆ ಉದ್ಯೋಗ ನಿಮಿತ್ತ ಆಂಧ್ರಪ್ರದೇಶದ ಹೈದರಾಬಾದಿಗೆ ಬಂದು ನೆಲೆಸಿದರು.

ಲಾಲ್ ಬಹದ್ದೂರ್ ಶಾಸ್ತ್ರಿ ಒಳಾಂಗಣ ಕ್ರೀಡಾಂಗಣ ಬ್ಯಾಡ್ಮಿಂಟನ್ ಆಟಗಾರರಿಗೆ ಬ್ಯಾಡ್ಮಿಂಟನ್ ಆಟದ ಕಾಶಿಯಂತೆ. ಇಲ್ಲಿರುವ ಕ್ರೀಡಾಪಟುಗಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಬ್ಯಾಡ್ಮಿಂಟನ್ ಕ್ಷೇತ್ರದಲ್ಲಿ ತಮ್ಮ ಛಾಪನ್ನು ಮೂಡಿಸಿದವರು. ಇಲ್ಲಿಯೇ ಮೇರು ಸರ್ ಬ್ಯಾಡ್ಮಿಂಟನ್ ನ ಎಲ್ಲ ಹಂತಗಳಲ್ಲಿ ಆಕೆಯನ್ನು ತರಬೇತುಗೊಳಿಸಲಾರಂಭಿಸಿದರು. ಪುಲ್ಲೇಲ ಗೋಪಿಚಂದ್ ಅವರ ತರಬೇತಿಯು ಆಕೆಗೆ ಲಭಿಸಿತು. ಇಲ್ಲಿಯೇ ಆಕೆಗೆ ಕಶ್ಯಪ್ ಸ್ನೇಹವು ದೊರೆಯಿತು.

ತರಬೇತುದಾರರು ಯಾವಾಗಲೂ ಹೇಳುತ್ತಿದ್ದ 5 ಗಳು ಸ್ಟ್ಯಾಮಿನಾ(). ಸ್ಪೀಡ್(ವೇಗ), ಸ್ಟ್ರೆಂತ (ತಾಕತ್ತು) ಸ್ಕಿಲ್(ಜಾಣ್ಮೆ) ಮತ್ತು ಸ್ಪಿರಿಟ್(ಆತ್ಮ ಬಲ)ಗಳಲ್ಲಿ ಆಕೆ ಕೆಲವನ್ನು ವಂಶಗತವಾಗಿ ಮತ್ತೆ ಕೆಲವನ್ನು ಸತತ ಪ್ರಯತ್ನ ಮತ್ತು ಗುರುಗಳ ತರಬೇತಿಯಿಂದ ಪಡೆದಳು.

ಆ ವರ್ಷ ವಿಶಾಖಪಟ್ಟಣದಲ್ಲಿ ನಡೆದ ರಾಜ್ಯ ಜೂನಿಯರ್ ಬ್ಯಾಡ್ಮಿಂಟನ ಶಿಪ್ ನ ನಾಲ್ಕು ವಿಭಾಗಗಳಲ್ಲಿ ಚಿನ್ನದ ಪದಕವನ್ನು ಪಡೆದಳು. ಮುಂದೆ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿ ಅಲ್ಲಿ ರಾಷ್ಟ್ರಮಟ್ಟದ ಆಟಗಾರ್ತಿ ಶಹನಾಝ್ ನಿಜ್ವಿಯೊಂದಿಗೆ ಫೈನಲ್ ನಲ್ಲಿ ಸ್ಪರ್ಧಿಸಿ ಎರಡನೇ ಸ್ಥಾನ ಪಡೆದಳು. ಮರು ವರ್ಷ ಮತ್ತೆ ರಾಷ್ಟ್ರೀಯ ಬ್ಯಾಡ್ಮಿಂಟನ್ ಶಿಪ್ ನಲ್ಲಿ ಪ್ರಥಮ ಸ್ಥಾನ ಗಳಿಸಿದ ಸೈನಾ ಜೆಕ್ ಗಣರಾಜ್ಯದ ಪ್ರೇಗ್ ನಗರದಲ್ಲಿ ನಡೆಯುತ್ತಿದ್ದ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ಶಿಪ್ ನಲ್ಲಿ ಭಾಗವಹಿಸಿ ಮಲೇಷಿಯಾದ ಯಾನಾ ಜೊತೆಯ ಫೈನಲ್ಸ್ ಆಟದಲ್ಲಿ ಗೆದ್ದು ಪ್ರಶಸ್ತಿ ಪಡೆದಳು. ಇದು ಆಕೆಯ ಮೊತ್ತ ಮೊದಲ ಅಂತರಾಷ್ಟ್ರೀಯ ಪ್ರಶಸ್ತಿಯಾಗಿತ್ತು.

ಮುಂದೆ ಸರ್ವ ಶ್ರೇಷ್ಠ ಬ್ಯಾಡ್ಮಿಂಟನ್ ಆಟಗಾರ ಸರ್ವಧಮನ ರಾಜನ್ ಅಕಾಡಮಿಗೆ ಸೇರಿದ ಸೈನಾ ನೆಹ್ವಾಲ್ ಅಲ್ಲಿ ರಾಜನ್ ಅವರ ತರಬೇತಿಯಲ್ಲಿ ಇನ್ನಷ್ಟು ಹೆಚ್ಚಿನ ತಂತ್ರಗಾರಿಕೆ ಮತ್ತು ಹೊಸ ಹೊಸ ಕೌಶಲ್ಯಗಳನ್ನು ಕಲಿತಳು, ಕೊಂಚ ಸ್ಥೂಲಕಾಯದ ಆಕೆ ರಾಜನ್ ಅವರ ಬಳಿಯಲ್ಲಿ ಡಯಟ್ ಮಾಡುವುದನ್ನು ಕಲಿತಳು. ಮೂಲತಃ ಹರಿಯಾಣದ ಹುಡುಗಿಯಾಗಿದ್ದ ಸೈನಾ ಈ ಮುಂಚೆ ಎಂದು ಡಯಟ್ ಮಾಡಿರಲಿಲ್ಲ ಆದರೆ ರಾಜನ್ ಅಕಾಡೆಮಿಯ ಶಿಸ್ತು ಬದ್ಧ ಡಯಟ್ ಆಕೆಯನ್ನು ಬೆಕ್ಕಿನಂತೆ ಚಾಣಾಕ್ಷತೆಯನ್ನು, ಹಕ್ಕಿಯಂತೆ ಹಗುರತನವನ್ನು ಮೈಗೂಡಿಸಿಕೊಳ್ಳುವಂತೆ ಮಾಡಿತು. ಆಕೆಯೊಂದಿಗೆ ಆಡುತ್ತಿದ್ದ ಆಕೆಯ ಪುರುಷ ಸ್ನೇಹಿತರಿಗೂ ಆಕೆಯನ್ನು ಮೀರಿಸಲು ಅಸಾಧ್ಯವೆನಿಸಿದಾಗ ಸ್ನೇಹಿತರ ಒತ್ತಾಸೆಯಂತೆ ಆಕೆ ರಾಜನ್ ಅವರಿಗೆ ವಿನಂತಿಸಿಕೊಂಡು ತಾನಿನ್ನೂ ಜೂನಿಯರ್ ನಲ್ಲಿ ಸ್ಪರ್ಧಿಸುವಂತಹ ಸ್ಪರ್ಧಿಯಾಗಿದ್ದು ಕೂಡ ಫಿಲಿಫೈನ್ಸ್ ನಲ್ಲಿ ನಡೆಯುತ್ತಿದ್ದ ವಿಶ್ವ ಬ್ಯಾಡ್ಮಿಂಟನ್ ಸೀನಿಯರ್ ಸ್ಪರ್ಧೆಗಳಲ್ಲಿ ಭಾಗವಹಿಸಿ ಮೊದಲು ಚೀನಾದ ಯಿನ್ ಳನ್ನು ಸೋಲಿಸಿದಳು. ನಂತರ ಎರಡನೇ ಆಟದಲ್ಲಿ ಮಲೇಶಿಯಾದ ಲಾಯ್ ಳನ್ನು ಸೋಲಿಸಿದಳು. ಅಂತಿಮವಾಗಿ ಫೈನಲ್ ತಲುಪಿದ ಸೈನಾ ಜೂಲಿಯ ವಾಂಗ್ ಳನ್ನು ಸೋಲಿಸಿ ಫಿಲಿಪ್ಪೈನ್ಸ್ ವರ್ಲ್ಡ್ ಚಾಂಪಿಯನ ಶಿಪ್ ಗೆದ್ದುಕೊಂಡಳು. ನಂತರ ನಡೆದದ್ದು ಇತಿಹಾಸ... ಆನೆ ನಡೆದದ್ದೇ ಹಾದಿ ಎಂಬಂತೆ ಸೈನಾಳ ಗೆಲುವಿನ ಓಟ ಮುಂದುವರೆಯಿತು.

2008ರಲ್ಲಿ ನಡೆದ ಚೈನಿಸ ತೈಪೆ ಓಪನ್ ನಲ್ಲಿ ಪ್ರಶಸ್ತಿ ಗಳಿಸಿದ ಆಕೆ ಮುಂದೆ 2008ರಲ್ಲಿ ನಡೆದ ಕಾಮನ ವೆಲ್ತ್ ಗೇಮ್ಸ್ ನಲ್ಲಿ ಪ್ರಥಮ ಸ್ಥಾನ ಗಳಿಸಿ ವಿಶ್ವ ಬ್ಯಾಡ್ಮಿಂಟನ್ ಶ್ರೇಯಾಂಕದ ಅಗ್ರ ಆಟಗಾರ್ತಿ ಎನಿಸಿದಳು.. 2012ರಲ್ಲಿ ನಡೆದ ಒಲಂಪಿಕ್ ಗೇಮ್ಸ್ ನಲ್ಲಿ ಕಂಚಿನ ಪದಕ ಗಳಿಸಿದ ಸೈನಾ ಅತಿ ಹೆಚ್ಚಿನ ಅಂಕಗಳನ್ನು ಗಳಿಸಿದ ಬ್ಯಾಡ್ಮಿಂಟನ್ ತಾರೆ ಎನಿಸಿದಳು.

ಮುಂದೆ ಜಾಹೀರಾತು ಲೋಕಕ್ಕೆ ತನ್ನನ್ನು ತಾನು ತೆರೆದುಕೊಂಡ ಸೈನಾ ಹಲವಾರು ಜಾಹೀರಾತುಗಳನ್ನು ಒಂದರ ಹಿಂದೆ ಒಂದರಂತೆ ನೀಡಲಾರಂಭಿಸಿದಳು. ಪ್ರತಿಯೊಂದು ವೃತ್ತಿಗೂ ಅದರದ್ದೇ ಆದ ಕಾರ್ಯವೈಖರಿ ಇರುವಂತೆ ಜಾಹೀರಾತು ಲೋಕದ ಶೂಟಿಂಗ್ ನ ಕಾರ್ಯವೈಖರಿಯಿಂದಾಗಿ ಆಕೆಯ ಶಿಸ್ತು ಬದ್ಧ ತರಬೇತಿ ಜೀವನಕ್ಕೆ ಇದರಿಂದ ವ್ಯತ್ಯಯವಾಯಿತು. ಶಿಸ್ತಿನ ಕೊರತೆಯಿಂದಾಗಿ ಆಟದಲ್ಲಿ ಆಕೆಗೆ ಸಾಧಿಸಲು ಆಗಲಿಲ್ಲ.

ಮುಂದೆ ಭಾರತದಲ್ಲಿ ನಡೆದ ಇಂಡಿಯಾ ಓಪನ್ ಸೂಪರ್ ಸೀರೀಸ್ ನಲ್ಲಿ ಚೀನಾದ ಸುಯಿ ಖಿಷಿಮೋಟೋರಿಂದ ಸೋಲನ್ನು ಅನುಭವಿಸಿದ ಆಕೆ ಇಂಗ್ಲೆಂಡ್ ಓಪನ್ ಸೀರೀಸ್ ಮತ್ತು ಸ್ವಿಸ್ ಓಪನ್ ಸೀರೀಸ್ ಗಳಲ್ಲಿ ಸೋಲನ್ನು ಅನುಭವಿಸಿ ವಿಶ್ವ ಬ್ಯಾಡ್ಮಿಂಟನ್ ನಲ್ಲಿ ಎರಡನೇ ಸ್ಥಾನದಿಂದ 9ನೇ ಸ್ಥಾನಕ್ಕೆ ಇಳಿದಳು. ಸತತ ಸೋಲಿನಿಂದ ಕಂಗೆಟ್ಟ ಸೈನಾ ತನ್ನ ಮುಂದಿನ ಆಟದಲ್ಲಿ ತೀವ್ರ ಕಾಲಿನ ಉಳುಕಿಗೆ ಒಳಗಾದಳು. ಕಡ್ಡಾಯವಾಗಿ ಎರಡು ತಿಂಗಳ ವಿಶ್ರಾಂತಿಯನ್ನು ವೈದ್ಯರು ಆಕೆಗೆ ವಿಧಿಸಿದರು.

ಸೈನಾಳ ಆಟದಲ್ಲಿ ಮೊದಲಿನ ತಾಕತ್ತಿಲ್ಲ, ಸೈನಾ ಮುಗಿದು ಹೋದ ಕಥೆ ಎಂದು ಪತ್ರಿಕೆಗಳಲ್ಲಿ, ನ್ಯೂಸ್ ಚಾನೆಲ್ಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಜನರು ಮಾತನಾಡಲಾರಂಭಿಸಿದರು. ಸ್ವತಃ ಸೈನಾ ತನ್ನ ಮೇಲಿನ ಆತ್ಮವಿಶ್ವಾಸ ಕಳೆದುಕೊಂಡಿದ್ದಳು.

ಆದರೆ ಸ್ವಭಾವತಃ ಸಿಂಹದ ಮರಿಯಾಗಿದ್ದ ಸೈನಾ, ಪೂರ್ಣ ಪ್ರಮಾಣದ ವಿಶ್ರಾಂತಿಯ ನಂತರ ತನ್ನ ತಾಯಿಯೊಂದಿಗೆ ಬೆಂಗಳೂರಿಗೆ ಬಂದಳು. ಅಲ್ಲಿನ ಬ್ಯಾಡ್ಮಿಂಟನ್ ನ ಅಕಾಡೆಮಿಯಲ್ಲಿ ಪ್ರಸಿದ್ಧ ಬ್ಯಾಡ್ಮಿಂಟನ್ ಆಟಗಾರರಾದ ವಿಮಲ್ ಕುಮಾರ್ ಆಕೆಗೆ ತರಬೇತಿ ನೀಡಲಾರಂಭಿಸಿದರು. ಮತ್ತೆ ತನ್ನ ಸೋಲಿನ ಸುಳಿಯಿಂದ ಹೊರಬರಲು ಆಕೆಗೆ ಒಂದು ಗೆಲುವಿನ ಅವಶ್ಯಕತೆ ಇತ್ತು. ಆದರೆ ಭಾರತದ ಆಚೆಯೂ ಕೂಡ ಇನ್ನೋರ್ವ ಸಿಂಹದಮರಿಯಂತಹ ಹೆಣ್ಣು ಮಗಳು ತೀವ್ರ ತರಬೇತಿ ಪಡೆಯುತ್ತಿದ್ದಳು.

ಹೆತ್ತವರ ಬೆಂಬಲ, ಸ್ನೇಹಿತರ ಒತ್ತಾಸೆ ತರಬೇತುದಾರರ ಭರವಸೆ ಸೈನಾಳಲ್ಲಿ ಹೊಸ ಶಕ್ತಿಯನ್ನು ತುಂಬಿತು. ಬೆಂಗಳೂರಿನಲ್ಲಿ ನಡೆದ ಸೈಯದ್ ಮೋದಿ ಇಂಟರ್ನ್ಯಾಷನಲ್ ಬ್ಯಾಡ್ಮಿಂಟನ್ ಟೂರ್ನಮೆಂಟ್ ನಲ್ಲಿ ನಿಧಾನವಾಗಿ ಒಂದೊಂದೇ ಪಂದ್ಯಗಳಲ್ಲಿ ಗೆಲುವನ್ನು ಸಾಧಿಸಿ ಫೈನಲ್ ತಲುಪಿದಳು. ಸ್ಪೇನ್ ದೇಶದ ಕಾರ್ಲಾ ಮಾರ್ಟಿನೆಝ್ ವಿರುದ್ಧದ ಅಂತಿಮ ಹಣಾಹಣಿಯಲ್ಲಿ ರೋಚಕವಾಗಿ ಆಡಿದ ಸೈನಾ ಕೊನೆಯ ಸುತ್ತಿನಲ್ಲಿ ಕಾರ್ಲಾ ಮಾರ್ಟಿನೆಜ್ ಳನ್ನು ಸೋಲಿಸಿ ತನ್ನ ಗೆಲುವನ್ನು ದಾಖಲಿಸಿದಳು ಮುಂದೆ 2015 ಏಪ್ರಿಲ್ ಎರಡರಂದು ಇಂಡಿಯನ್ ಸೂಪರ್ ಸೀರೀಸ್ ನಲ್ಲಿ ಗೆದ್ದು ವಿಶ್ವ ಬ್ಯಾಡ್ಮಿಂಟನ್ ಶ್ರೇಯಾಂಕದ ನಂಬರ್ ಒನ್ ಆಟಗಾರ್ತಿ ಎನಿಸಿದಳು. 2017ರಲ್ಲಿ ಮತ್ತೆ ತನ್ನ ಮೊದಲಿನ ಕೋಚ್ ಪುಲ್ಲೇಲ ಗೋಪೀಚಂದ್ ಬಳಿ ವಾಪಸಾದ ಸೈನಾ, 2017ರಲ್ಲಿ ಕಾಮನ್ವೆಲ್ತ್ ಗೇಮ್ಸ್ ನಲ್ಲಿ ವೈಯಕ್ತಿಕ ಚಿನ್ನ ಮತ್ತು ಗ್ರೂಪ್ ಗೇಮ್ ನಲ್ಲಿ ಚಿನ್ನದ ಪದಕವನ್ನು ಗಳಿಸಿದಳು.

2009ರಲ್ಲಿ ಅರ್ಜುನ ಪ್ರಶಸ್ತಿ ಪಡೆದ ಸೈನಾ 2010ರಲ್ಲಿ ರಾಜೀವ್ ಗಾಂಧಿ ಖೇಲ್ ರತ್ನ ಮತ್ತು 2016ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ಪಡೆದಳು.

ಅಂತೆಯೇ ತನ್ನ ಬಹುದಿನಗಳ ಆತ್ಮೀಯ ಸ್ನೇಹಿತನಾಗಿದ್ದ ಅಂತರಾಷ್ಟ್ರೀಯ ಬ್ಯಾಡ್ಮಿಂಟನ ಆಟಗಾರ ಪಿ. ಕಶ್ಯಪ್ ರನ್ನು 2018ರ ಡಿಸೆಂಬರ್ 16ರಂದು ವಿವಾಹದ ಸೈನಾ ಇದೀಗ ಹೈದರಾಬಾದ್ ನ ಗಚ್ಚಿಬೌಲಿಯಲ್ಲಿ ತನ್ನದೇ ಆದ ಬ್ಯಾಡ್ಮಿಂಟನ್ ಕ್ರೀಡಾ ತರಬೇತಿ ಕೇಂದ್ರವನ್ನು ಹೊಂದಿದ್ದು ಹೊಸ ಪ್ರತಿಭೆಗಳನ್ನು ಬೆಳಕಿಗೆ ತರುವ ಕೆಲಸಕ್ಕೆ ಕೈ ಹಾಕಿದ್ದಾರೆ. ಆಕೆಯ ಪ್ರಕಾರ ಸೋಲು ಎಂದಿಗೂ ಸೋಲಲ್ಲ... ಬೀಳುವುದು, ಸಾವರಿಸಿಕೊಳ್ಳುವುದು, ಮತ್ತೆ ಎದ್ದು ಗೆಲುವನ್ನು ಸಾಧಿಸುವುದು ಎಲ್ಲವೂ ಜೀವನದ ಭಾಗವೇ ಎಂದು ಹೇಳುವ ಸೈನಾ ಹೆಣ್ಣು ಮಕ್ಕಳ ಪಾಲಿನ ಆಶಾಕಿರಣವಾಗಿ ಭಾರತದ ಯುತ್ ಐಕಾನ್ ಆಗಿ, ವಿಶ್ವ ಶ್ರೇಷ್ಠ ಬ್ಯಾಡ್ಮಿಂಟನ್ ಆಟಗಾರ್ತಿಯಾಗಿ ಭಾರತದ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿದಿದ್ದಾಳೆ. ಆಕೆಯ ತರಬೇತಿಯಲ್ಲಿ ಇನ್ನೂ ಹಲವಾರು ಪ್ರತಿಭೆಗಳು ಆಕಾಶದೆತ್ತರದ ಸಾಧನೆ ಮಾಡಲಿ ಎಂದು ಹಾರೈಸೋಣ.

**ವೀಣಾ ಹೇಮಂತ್ ಗೌಡ ಪಾಟೀಲ್**
ಮುಂಡರಗಿ, ಗದಗ.

# ಕುಡಿಯುವ ನೀರು ಪೂರೈಕೆಗಿಲ್ಲ ಹಣದ ಕೊರತೆ

**(ಮೊದಲ ಪುಟದಿಂದ)**

ಗಡುವು ವಿದಿಸಿದರು.

ಇ-ಆಫೀಸ್ ಬಳಕೆಯ ಬಗ್ಗೆ ಮಾಹಿತಿ ಪಡೆದ ಸಚಿವರು, ಕೊಪ್ಪಳ ಜಿಲ್ಲೆಯಲ್ಲಿ ಬಹುತೇಕ ಎಲ್ಲಾ ತಾಲೂಕುಗಳಲ್ಲೂ ಇ-ಆಫೀಸ್ ಅನುಷ್ಠಾನಗೊಂಡಿರುವ ಬಗ್ಗೆ ಮಾಹಿತಿ ಇದೆ. ಆದರೆ, ಎಲ್ಲಾ ಕಡತಗಳು ಇ-ಆಫೀಸ್ ಮೂಲಕ ವಿಲೇವಾರಿಯಾಗುತ್ತಿಲ್ಲ. ಇ-ಆಫೀಸ್ ಮೂಲಕ ಕಡತ ವಿಲೇವಾರಿ ಮಾಡಿದಲ್ಲಿ ಎಲ್ಲಾ ಕೆಲಸಗಳು ವೇಗ ಪಡೆಯುತ್ತವೆ. ಅಧಿಕಾರಿಗಳ-ಜನರ ಸಮಯವೂ ಉಳಿಯುತ್ತದೆ. ಹೀಗಾಗಿ ಶೀಘ್ರದಲ್ಲಿ ಕೊಪ್ಪಳದಲ್ಲಿ ಇ-ಆಫೀಸ್ ಅನ್ನು ಶೇ.100 ರಷ್ಟು ಸಂಪೂರ್ಣವಾಗಿ ಅನುಷ್ಠಾನಗೊಳಿಸಬೇಕು ಎಂದು ಸಚಿವರು ಸೂಚಿಸಿದರು.

ತಮ್ಮದೇ ಕೃಷಿ ಭೂಮಿಗೆ ಓಡಾಡಲು ರಸ್ತೆ ಇಲ್ಲದಂತಹ ರೈತರು ಇದ್ದಾರೆ. ಈ ಸಮಸ್ಯೆಯನ್ನು ನೀಗಿಸುವ ಸಲುವಾಗಿಯೇ ಕಳೆದ ವಾರ ರೈತರ ಕೃಷಿ ಭೂಮಿಗೆ ರಸ್ತೆ ಒದಗಿಸಬೇಕು ಎಂದು ಹೊಸ ಸುತ್ತೋಲೆ ಹೊರಡಿಸಲಾಗಿದೆ. ಅಧಿಕಾರಿಗಳನ್ನು ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಪ್ರಸ್ತುತ ಎಲ್ಲಾ ರೈತರ ಕೃಷಿ ಭೂಮಿಗೆ ರಸ್ತೆ ಒದಗಿಸಬೇಕು. ಬಗರ್ ಹುಕುಂ ಸಾಗುವಳಿ ಚೀಟಿ ನೀಡುವ ಮುನ್ನ ಅಂತಹ ಪ್ರದೇಶಗಳಲ್ಲೂ ಕೃಷಿ ಭೂಮಿಗೆ ರಸ್ತೆ ವ್ಯವಸ್ಥೆ ಕಲ್ಪಿಸಬೇಕು. ಅಲ್ಲದೆ, ಮುಂದಿನ ಆರು ತಿಂಗಳ ಒಳಗಾಗಿ ಅರ್ಹ ಫಲಾನುಭವಿಗಳಿಗೆ ಬಗರ್ ಹುಕುಂ ಭೂಮಿಯನ್ನು ಮಂಜೂರು ಮಾಡಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ಬಗರ್ ಹುಕುಂ ಅರ್ಜಿ ವಿಲೇವಾರಿ ಸಂದರ್ಭದಲ್ಲಿ ಅಧಿಕಾರಿಗಳು ಯಾವುದೇ ಪ್ರಭಾವಿಗಳ ಅಥವಾ ರಾಜಕೀಯಪಕ್ಷದನಾಯಕರಿಗೆಅನುಕೂಲವಾಗುವಂತೆ ವರ್ತಿಸಬಾರದು. ಬದಲಾಗಿ ಬಡ ಜನರಿಗೆ ಮತ್ತು ಅರ್ಹರಿಗೆ ನ್ಯಾಯ ಒದಗಿಸಲು ಬದ್ಧರಾಗಿರಬೇಕು. ನಿಜಕ್ಕೂ ಉಳುಮೆಯಲ್ಲಿ ತೊಡಗಿರುವ ರೈತರಿಗೆ ಮಾತ್ರ ಸಾಗುವಳಿ ಚೀಟಿ ನೀಡಬೇಕು ಎಂದು ಅವರು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಜಿಲ್ಲೆಯಲ್ಲಿ ಒಟ್ಟು 36 ಕಂದಾಯ ಗ್ರಾಮಗಳು ರಚನೆಯಾಗಬೇಕಿತ್ತು. ಆದರೆ, ಈವರೆಗೆ 27 ಗ್ರಾಮಗಳಿಗೆ ಮಾತ್ರ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಉಳಿದ ಗ್ರಾಮಗಳನ್ನು ಕಂದಾಯ ಗ್ರಾಮಗಳು ಎಂದು ಘೋಷಿಸಿ ಹಕ್ಕುಪತ್ರ ನೀಡುವ ಕಾರ್ಯವನ್ನು ಸಹ ಅಭಿಯಾನ ಮಾದರಿಯಲ್ಲಿ ನಡೆಸಬೇಕು ಎಂದು ಕಂದಾಯ ಅಧಿಕಾರಿಗಳಿಗೆ ಸಚಿವರು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ನಮೂನೆ 50, 53, 57ರ ಅಕ್ರಮ ಸಕ್ರಮ ಯೋಜನೆಯಡಿ ಸಾವಿರಾರು ಅರ್ಜಿಗಳು ಸಲ್ಲಿಕೆಯಾಗಿವೆ. ಬಗರ್ ಹುಕುಂ ತಂತ್ರಾಂಶದ ಮೂಲಕ ಅಕ್ರಮ ಸಾಗುವಳಿ ಭೂಮಿಯಲ್ಲಿ ಕೃಷಿ ಅಥವಾ ಇನ್ಯಾವುದೇ ಚಟುವಟಿಕೆ ಬಗ್ಗೆ ಸ್ಯಾಟಲೈಟ್ ಇಮೇಜ್ ಮೂಲಕ ಮಾಹಿತಿ ಪಡೆದು ಅರ್ಜಿ ವಿಲೇವಾರಿ ಮಾಡುವುದು ನ್ಯಾಯಸಮ್ಮತವಾಗಲಿದೆ. ಈ ಪ್ರಕ್ರಿಯೆಗೆ ಆ್ಯಪ್ ಸಹಕಾರಿಯಾಗಲಿದೆ. ಶೀಘ್ರದಲ್ಲೇ ಈ ಆ್ಯಪ್ ಅಧಿಕಾರಿಗಳ ಕೈಸೇರಲಿದೆ. ಇದರ ಸಹಾಯದೊಂದಿಗೆ ಅಧಿಕಾರಿಗಳು ತ್ವರಿತಗತಿಯಲ್ಲಿ ಬಹರ್ ಹುಕುಂ ಅರ್ಜಿ ವಿಲೇವಾರಿಗೊಳಿಸಬಹುದು. ಅರ್ಜಿ ವಿಲೇವಾರಿಯಾದ ನಂತರ ಅರ್ಹ ಫಲಾನುಭವಿಗಳಿಗೆ ಇ-ಸಾಗುವಳಿ ಚೀಟಿಯನ್ನೂ ತಂತ್ರಾಂಶದ ಮೂಲಕವೇ ಒದಗಿಸಬಹುದು ಎಂದು ಸಚಿವರು ಅಧಿಕಾರಿಗಳಿಗೆ ತಿಳಿಸಿದರು.



ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ ಅವರು ಮಾತನಾಡಿ, ಜಿಲ್ಲೆಯಲ್ಲಿ ಸದ್ಯಕ್ಕೆ ಕುಡಿಯುವ ನೀರಿನ ಸಮಸ್ಯೆ ಇಲ್ಲ. ಬರಕಾಣಿಸಿಕೊಂಡಹಿನ್ನೆಲೆಯಲ್ಲಿಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಮುಂಜಾಗ್ರತಾ ಕ್ರಮ ವಹಿಸಲು ಸೂಚಿಸಲಾಗಿದೆ. ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಸಮರ್ಪಕ ಪೂರೈಕೆಗೆ ಅನುದಾನ ಬೇಕಾಗುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರಕುಮಾರ ಕಟಾರಿಯಾ, ಕಂದಾಯ ಇಲಾಖೆಯ ಆಯುಕ್ತರಾದ ಪಿ.ಸುನೀಲ್‌ಕುಮಾರ, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಕೃಷ್ಣ ಬಾಜಪೇಯಿ, ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಜಿಪಂ ಉಪ ಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ ಹಾಗೂ ತಹಸೀಲ್ದಾರರು, ತಾಪಂ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕವಿ ಮನಸು

## ಬಂಧನದ ಬದುಕು



ಗೂಡಿನೊಳಗಡೆ ಬಂಧಿ
ಬಾಡಿ ಹೋಗಿಹ ಮನದಿ
ಕೂಡಿ ಬಾಳುವ ಕನಸು ನುಚ್ಚುನೂರು
ಕಾಡಿನೊಳಗಿನ ಬದುಕು
ಜೋಡಿ ಹಕ್ಕಿಯ ನೆನಪು
ನಾಡಿ ಮಿಡಿತದೆ ತುಂಬಿ ಹರಿಯುತಿಹುದು॥

ಆರು ವರ್ಷದ ಕೆಳಗೆ
ಸೇರಿ ಮರಿಗಳ ಜೊತೆಗೆ
ನೂರು ಕನಸನು ಹೊತ್ತು ಕಾಡಲಿದ್ದೆ
ಸೂರು ಮರಗಳ ಪೊಟರೆ
ಕೀರು ಹಣ್ಣಿನ ರಸವೆ
ದೂರು ಕೇಳುವರಾರು ಬಂಧಿಯಾದೆ॥

ಬಂದು ನೋಡಿದ ಮನುಜ
ಚಂದಕಾಸೆಯ ಪಟ್ಟ
ತಂದು ನನ್ನನು ತನ್ನ ಗೂಡಲಿಟ್ಟ
ಬಂಧಿಯಾಗಿಹ ನನ್ನ
ಚಂದ ನೋಡುವ ಮುನ್ನ
ನಿಂದು ಯೋಚಿಸಲಾರ ನನ್ನ ಕಷ್ಟ॥

ಮಂದೆಯಗಲಿದೆನಲ್ಲ
ಬಂಧು ಬಾಂಧವರಿಲ್ಲ
ನೊಂದ ಮನಸನು ನೀನು ಬಲ್ಲೆಯೇನು
ಸಂದ ಬದುಕಿನ ನೆನಪು
ತಂದ ವೇದನೆ ನೂರು
ಕೊಂದು ಬಿಡು ಬದುಕಿನ್ನು ಫಲವದೇನು॥

। ಪೆರ್ಮುಖ ಸುಬ್ರಹ್ಮಣ್ಯ ಭಟ್

## ಬಳ್ಳಾರಿ ಮಹಾನಗರ ಪಾಲಿಕೆ: ಸ್ವಯಂ ಉದ್ಯೋಗ ಕೈಗೊಳ್ಳಲು ಸಾಲ-ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ:**
ಪ್ರಸ್ತಕ ಸಾಲಿಗೆ ಕೇಂದ್ರ ಪುರಸ್ಕೃತ ಯೋಜನೆಯಾದ ದೀನ್ ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿ ಸ್ವಯಂ ಉದ್ಯೋಗ ಕೈಗೊಳ್ಳಲು ಸಾಲ-ಸೌಲಭ್ಯಕ್ಕಾಗಿ 18 ವರ್ಷ ಮೇಲ್ಪಟ್ಟ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಮಹಾನಗರ ಪಾಲಿಕೆ ಆಯುಕ್ತ ಜಿ.ಖಲೀಲ್‌ಸಾಬ್ ಅವರು ತಿಳಿಸಿದ್ದಾರೆ.
ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ನ.31 ರೊಳಗಾಗಿ ಮಹಾನಗರ ಪಾಲಿಕೆ ವಲಯ ಕಚೇರಿ - 1ರ (ಹಳೇ ಕಟ್ಟಡದ) ಡೇ-ನಲ್ಮ್ ಶಾಖೆಗೆ ಸಲ್ಲಿಸಬೇಕು.
ಹೆಚ್ಚಿನ ಮಾಹಿತಿಗಾಗಿ ಮಹಾನಗರ ಪಾಲಿಕೆ ವಲಯ ಕಚೇರಿ - 1ರ (ಹಳೇ ಕಟ್ಟಡದ) ಡೇ-ನಲ್ಮ್ ಶಾಖೆ ಅಥವಾ ದೂ.08392-273479/278168ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು.

# ಸಂಶೋಧನೆಗಳು ರೈತರ ಬದುಕಿಗೆ ಆಧಾರವಾಗಲಿ

## ಅಂತಾರಾಷ್ಟ್ರೀಯ ಕೃಷಿ ಅಭಿಯಂತರರ ಸಮ್ಮೇಳನದಲ್ಲಿ ಕೃಷಿ ಸಚಿವರಾದ ಎನ್ ಚಲುವರಾಯಸ್ವಾಮಿ ಹೇಳಿಕೆ

**ಹಂಪಿ ಟೈಮ್ಸ್ ರಾಯಚೂರು**
ದಿನೇದಿನೆ ಪ್ರಕೃತಿಯಲ್ಲಿ ಏರಿಳಿತವಾಗುತ್ತಿರುವ ಈ ಕಾಲ ಘಟ್ಟದಲ್ಲಿ ಕಡಿಮೆ ಅವಧಿ, ಕಡಿಮೆ ನೀರು, ಕಡಿಮೆ ಖರ್ಚಿನಲ್ಲಿ ಕೃಷಿ ಮಾಡುವ ತಂತ್ರಜ್ಞಾನ ಅಳವಡಿಸಿಕೊಳ್ಳಲು ಬಹುಕೋಟಿ ರೈತರಿಗೆ ಮಾರ್ಗದರ್ಶನ ಮಾಡುವಲ್ಲಿ ಕೃಷಿ ಕಾಲೇಜುಗಳು, ಕೃಷಿ ವಿಶ್ವವಿದ್ಯಾಲಯಗಳು ಮತ್ತು ಕೃಷಿ ಸಂಶೋಧಾನ ಕೇಂದ್ರಗಳ ಜವಾಬ್ದಾರಿ ಅತೀ ಮಹತ್ವದ್ದಾಗಿದೆ ಎಂದು ಕೃಷಿ ಸಚಿವರಾದ ಎನ್ ಚಲುವರಾಯಸ್ವಾಮಿ ಹೇಳಿದರು.

ರಾಯಚೂರು ಕೃಷಿ ವಿಶ್ವವಿದ್ಯಾಲಯ ಸಭಾಂಗಣದಲ್ಲಿ ನವೆಂಬರ್ 6ರಂದು ನಡೆದ ಕೃಷಿ ಅಭಿಯಂತರರ ಅಂತಾರಾಷ್ಟೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ ಕೆಲವು ದಶಕಗಳ ಹಿಂದೆ ಪ್ರಕೃತಿಯಲ್ಲಿ ಇದ್ದಂತಹ ಪರಿಸ್ಥಿತಿ ಈಗಿಲ್ಲ. ಹೀಗೆ ಕೆಲವು ದಶಕಗಳಿಂದ ಏರುಪೇರಾಗುತ್ತಲೇ ಸಾಗಿದೆ. ಮಣ್ಣಿನ ಸ್ಥಿತಿ ಸರಿ ಇಲ್ಲ. ಇದರೊಟ್ಟಿಗೆ ರೈತರು ಸಹ ಸಮಸ್ಯೆ ಎದುರಿಸುತ್ತಿದ್ದಾರೆ. ಮಣ್ಣಿನ ಫಲವತ್ತತೆ ಬಹಳಷ್ಟು ಕಡಿಮೆ ಆಗುತ್ತಿದೆ. ಇದನ್ನು ನಾವೆಲ್ಲರೂ ಅರಿಯಬೇಕು. ರೈತರಿಗೆ ಸ್ಪಂದಿಸುವ ಕಾರ್ಯ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿನ ಕೃಷಿ ಕಾಲೇಜುಗಳು, ಕೃಷಿ ವಿವಿಗಳಿಂದ ಆಗಬೇಕು. ಈ ನಿಟ್ಟಿನಲ್ಲಿ ರಾಜ್ಯದಲ್ಲಿರುವ ವಿವಿಧ ಕೃಷಿ ವಿವಿಗಳು ಹಾಗೂ ಕೃಷಿ ವಿಜ್ಞಾನಿಗಳು ಹೆಚ್ಚಿನ ಜವಾಬ್ದಾರಿ ತೆಗೆದುಕೊಳ್ಳುವ ಅನಿವಾರ್ಯತೆ ಇದೆ ಎಂದರು. ರಾಜ್ಯದಲ್ಲಿ ಕೃಷಿ ಹಿನ್ನೆಲೆಯಲ್ಲಿ ಕೃಷಿ ಕಾಲೇಜು, ಕೃಷಿ ವಿವಿ ಸೇರಿದಂತೆ ಅನೇಕ ವಿದ್ಯಾ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಇವುಗಳ ಉಪಯೋಗ ಈ ದೇಶದಲ್ಲಿ ಆಗಬೇಕಿದೆ ಎಂದರು.

ಕೃಷಿ ವಿವಿಗಳು, ಕೃಷಿ ಇಲಾಖೆ, ಕೃಷಿ ಕಾಲೇಜುಗಳು ಎಲ್ಲರೂ ರೈತರೊಂದಿಗೆ ಇರಬೇಕು. ರೈತರು ಉತ್ತಮವಾಗಿ ಕೃಷಿ ಮಾಡಲು, ಅವರು ಕೃಷಿಯಲ್ಲಿ ಉತ್ತಮ ಫಲಿತಾಂಶ ಪಡೆಯಲು ನಾವು ಮಾರ್ಗದರ್ಶನ ಮಾಡಬೇಕು. ಈ ನಿಟ್ಟಿನಲ್ಲಿ ನಮ್ಮ ಕೃಷಿ ಸಂಶೋಧಾನ ಕೇಂದ್ರಗಳು ಹೆಚ್ಚಿನ ರೀತಿಯಲ್ಲಿ ಕೆಲಸ ನಿರ್ವಹಿಸಬೇಕು. ಇದಕ್ಕೆ ಬೇಕಾದ ಸಹಕಾರವನ್ನು ಸರ್ಕಾರದಿಂದ ಕೊಡುವುದಾಗಿ ಸಚಿವರು ತಿಳಿಸಿದರು.

ಭಾರತ ಮೂಲತಃ ಕೃಷಿ ಪ್ರಧಾನ ದೇಶವಾಗಿದೆ. ಇದನ್ನು ಕೃಷಿಶಾಸ್ತ್ರ ಓದುವ ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳಬೇಕು. ಬರೀ ಉದ್ಯೋಗಕ್ಕಾಗಿ ಓದದೇ ಕೃಷಿಕರ ಸಮಸ್ಯೆಗೆ ಸ್ಪಂದಿಸುವ ರೀತಿಯಲ್ಲಿ ವಿದ್ಯಾಭ್ಯಾಸ ನಡೆಸಬೇಕು. ಯಾವ ಸಂದರ್ಭದಲ್ಲಿ ಯಾವ ಬೆಳೆ ಬೆಳೆದರೆ ಅನುಕೂಲ, ಲಾಭದಾಯಕ ರೀತಿಯಲ್ಲಿ ಕೃಷಿ ಮಾಡುವುದು ಹೇಗೆ ಎಂಬುದ ಬಗ್ಗೆ ರೈತರಿಗೆ ಮಾರ್ಗದರ್ಶನ ಮಾಡುವ ರೀತಿಯಲ್ಲಿ ಅಧ್ಯಯನ ನಡೆಸಬೇಕು. ಅಂತಹ ಮನಸ್ಥಿತಿಯನ್ನು ಕೃಷಿ ಓದುವ ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಸಚಿವರು ಸಲಹೆ ಮಾಡಿದರು.

ಕೃಷಿ ಶಾಸ್ತ್ರ ಓದುವ ವಿದ್ಯಾರ್ಥಿಗಳು ಕೃಷಿ ಕ್ಷೇತ್ರದ ಸಾಧಕ ಭಾದಕಗಳ ಬಗ್ಗೆ ಸರಿಯಾಗಿ ಓದಿ ತಿಳಿದುಕೊಂಡಲ್ಲಿ ಹಾಗೂ ಬರೀ ಉದ್ಯೋಗಕ್ಕಾಗಿ ಓದದೇ ಕೃಷಿ ಉದ್ಯಮಿಗಳಾಗಿ ಬೆಳೆದಲ್ಲಿ ನೂರಾರು ಜನರಿಗೆ ಉದ್ಯೋಗ ನೀಡಬಹುದಾಗಿದೆ. ಈ ನಿಟ್ಟಿನಲ್ಲಿ ನಿಮ್ಮೆಲ್ಲರ ಗುರಿ ದೊಡ್ಡದಾಗಿರಬೇಕು ಎಂದು ಸಚಿವರು ಕೃಷಿ ಪದವೀಧರರು ಮತ್ತು ಇನ್ನೀತರ ವಿದ್ಯಾರ್ಥಿಗಳಿಗೆ ಸಲಹೆ ಮಾಡಿದರು.





ಬರೀ ಕರ್ನಾಟಕದಲ್ಲಷ್ಟೇ ಅಲ್ಲ ಇಡೀ ದೇಶದಲ್ಲಿಯೇ ನಾವು ಬರಗಾಲ ಎದುರಿಸುತ್ತಿದ್ದೇವೆ. ನಮಗಿಂತ ಕೆಟ್ಟ ದಿನಗಳನ್ನು ಬೇರೆ ಬೇರೆ ರಾಜ್ಯಗಳು ಎದುರಿಸುತ್ತಿವೆ. ನಾವು ಶೇ.90ರಷ್ಟು ಬಿತ್ತನೆ ಮಾಡಿದರು ಯಾವ ರೈತರಿಗೂ ಅದರ ಪ್ರತಿಫಲ ಸಿಗುತ್ತಿಲ್ಲ. ದೇಶವು ಇದೀಗ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಇದನ್ನು ನಾವೆಲ್ಲರೂ ಅರ್ಥೈಸಿಕೊಳ್ಳಬೇಕು. ಎಲ್ಲರೂ ಒಟ್ಟಿಗೆ ಪರಿಣಾಮಕಾರಿಯಾಗಿ ಕೆಲಸ ಮಾಡುವುದು ಇಂದಿನ ಅತೀ ಅಗತ್ಯದ ಕೆಲಸವಾಗಿದೆ ಎಂದರು.

ರಾಜ್ಯ ಸರ್ಕಾರವು ಕೃಷಿ ಕ್ಷೇತ್ರದ ಬೆಳವಣಿಗೆಗೆ ವಿಶೇಷ ಒತ್ತು ನೀಡಿದೆ. ಈ ದೇಶದ ಸಾಮಾನ್ಯ ಜನರ ಬದುಕನ್ನು ಸರಿದೂಗಿಸುವ ಬಹುದೊಡ್ಡ ಹೊಣೆ ನಮ್ಮ ಮೇಲಿದೆ. ಹೊಲದಲ್ಲಿ ಬೆಳೆ ಹಾಕಿ ಖರ್ಚು ಮಾಡಿದ ರೈತನು ಆದಾಯ ಬರುವವರೆಗೆ ನಿದ್ದೆ ಮಾಡುವುದಿಲ್ಲ. ಅಂತಹ ಕಷ್ಟದಲ್ಲಿರುವ ರೈತರೊಂದಿಗೆ ನಾವಿರೋಣ. ಈ ವಿಷಯದಲ್ಲಿ ಕೃಷಿ ಸಂಶೋಧನಾ ಕೇಂದ್ರಗಳು, ಕೃಷಿ ಕಾಲೇಜುಗಳ, ಕೃಷಿ ಇಲಾಖೆಗಳು ಎಚ್ಚರಿಕೆಯಿಂದ ಕಾರ್ಯರ್ವಹಿಸಬೇಕು ಎಂದು ಸಚಿವರು ಸಲಹೆ ಮಾಡಿದರು.

ಕೃಷಿ ತಜ್ಞರು, ಪದವೀಧರರೂ ಕೃಷಿ ಹಾಗೂ ಅದಕ್ಕೆ ಪೂರಕವಾದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಕೃಷಿ ಎಂಜಿನಿಯರಿಂಗ್‌ಗೆ ಪ್ರತ್ಯೇಕ ನಿರ್ದೇಶನಾಲಯ ಪ್ರಾರಂಭಕ್ಕೆ ಬೇಡಿಕೆ ಇದ್ದು, ಈ ಬಗ್ಗೆ ಪರಿಶೀಲಿಸಲಾಗುವುದು ಎಂದು ಸಚಿವರು ಹೇಳಿದರು.

ಸಿರಿಧಾನ್ಯಗಳ ಬೆಳೆ ಲಾಭದಾಯಕವಾಗಿದೆ. ಸರ್ಕಾರವು ಇದಕ್ಕೆ ಪ್ರೋತ್ಸಾಹ ಧನ ನೀಡುತ್ತಿದ್ದು, ರೈತರಿಗೆ ಹೆಚ್ಚಿನ ಜಾಗೃತಿ ಮೂಡಿಸಬೇಕು. ರಾಜ್ಯ ಸರ್ಕಾರ ಕೃಷಿ ಹಾಗೂ ರೈತರಿಗೆ ಹೆಚ್ಚಿನ ಆದ್ಯತೆ ನೀಡುತಿದ್ದು ಮುಂದಿನ ದಿನಗಳಲ್ಲಿ ಅವರಿಗೆ ಇನ್ನಷ್ಟು ಶಕ್ತಿ ತುಂಬಲಾಗುವುದು ಎಂದು ಸಚಿವರು ತಿಳಿಸಿದರು.

ಸಮಾರಂಭದಲ್ಲಿ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸ್‌ರಾಜು ಅವರು ಮಾತನಾಡಿ, ಕೃಷಿ ಅಭಿಯಂತರರ ಪ್ರಾಮುಖ್ಯತೆ ಹಾಗೂ ಜವಾಬ್ದಾರಿಗಳು, ಸಮಾಜಕ್ಕೆ ಅವರ ಕೊಡುಗೆ ಬಗ್ಗೆ ವಿವರಿಸಿದರು.

ಶಾಸಕರಾದ ಹಂಪಯ್ಯ ನಾಯಕ, ನವದೆಹಲಿಯ ಭಾರತೀಯ ಕೃಷಿ ಅಭಿಯಂತರರ ಸಂಘದ ಅಧ್ಯಕ್ಷರಾದ ಡಾ.ಎಸ್.ಎನ್.ಝ್ಹಾ, ಪ್ರಧಾನ ಕಾರ್ಯದರ್ಶಿ ಡಾ.ಪಿ.ಕೆ ಸಾಹು, ನವದೆಹಲಿಯ ಪ್ರಧಾನ ನಿರ್ದೇಶಕ ಮತ್ತು ಕಾರ್ಯದರ್ಶಿ ಡಾ.ಹಿಮಾಂಶು ಪಾಠಕ್, ರಾಯಚೂರು ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ಹನುಮಂತಪ್ಪ, ಜಿಲ್ಲಾಧಿಕಾರಿಗಳಾದ ಚಂದ್ರಶೇಖರ ನಾಯಕ ಎಲ್., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ತುಕಾರಾಂ ಪಾಂಡ್ವೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ, ಸಮಾವೇಶದ ಮುಖ್ಯಸ್ಥರಾದ ಡಾ.ಎಂ.ನೇಮಿಚಂದ್ರಪ್ಪ ಮತ್ತು ಡಾ.ಉದಯಕುಮಾರ ನಿಡೋಣಿ, ಅಪರ ಕೃಷಿ ನಿರ್ದೇಶಕರಾದ ವೆಂಕಟರಮಣ ರೆಡ್ಡಿ, ಜಂಟಿ ಕೃಷಿ ನಿರ್ದೇಶಕಿ ದೇವಿಕಾ ಆರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಬೆಂಬಲ ಬೆಲೆ ನಿಯಮಾನುಸಾರ ಭತ್ತ ಖರೀದಿಯಾಗಲಿ



**ಹಂಪಿ ಟೈಮ್ಸ್ ರಾಯಚೂರು**
ಜಿಲ್ಲೆಯಲ್ಲಿ 2023-24ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕನಿಷ್ಟ ಬೆಂಬಲಬೆಲೆ ಯೋಜನೆಯಡಿಯಲ್ಲಿ ರೈತರಿಂದ ಭತ್ತ ಖರೀದಿಸಲು ಎಲ್ಲಾ ತಾಲೂಕಾ ಕೇಂದ್ರಗಳ ವ್ಯಾಪ್ತಿಯಲ್ಲಿ ಭತ್ತ ಖರೀದಿ ಕೇಂದ್ರಗಳನ್ನು ಸ್ಥಾಪಿಸಿ ಪ್ರಮಾಣಾನುಸಾದ ಮತ್ತು ನಿಯಮಾನುಸಾರವಾಗಿ ಭತ್ತ ಖರೀದಿಸಲು ಸೂಕ್ತ ವ್ಯವಸ್ಥೆ ಮಾಡಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಡಾ.ಕೆ.ಆರ್ ದುರುಗೇಶ ಅವರು ಅಧಿಕಾರಿಗಳಿಗೆ ಸೂಚಿಸಿದರು.
ಅವರು ನ.7ರ(ಮಂಗಳವಾರ) ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಭತ್ತ ಖರೀದಿಸಲು ಜಿಲ್ಲೆಯಲ್ಲಿ ಭತ್ತ ಖರೀದಿ ಕೇಂದ್ರಗಳ ಸ್ಥಾಪನೆ ಕುರಿತು ಹಮ್ಮಿಕೊಂಡಿದ್ದ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.
ಜಿಲ್ಲೆಯಲ್ಲಿ ಅತಿ ಹೆಚ್ಚಾಗಿ ಭತ್ತ ಬೆಳೆಯುವ ಕಾರಣ ಭತ್ತದ ನಾಡು ಎಂದು ಕರೆಯಲ್ಪಡುತ್ತದೆ. ಇಲ್ಲಿನ ರೈತರಿಂದ ಸರ್ಕಾರದ ಆದೇಶದಂತೆ ಮುಂಗಾರು ಋತುವಿನಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರಾಜ್ಯದ ರೈತರಿಂದ ವಿವಿಧ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡಲು ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಮಾಡಿಕೊಳ್ಳುವುದು ಅಗತ್ಯವಾಗಿದ್ದು, ಜಿಲ್ಲೆಯಲ್ಲಿ ಭತ್ತ ಖರಿದಿ ಕೇಂದ್ರಗಳನ್ನು ಸ್ಥಾಪಿಸಿ ಕನಿಷ್ಟ ಬೆಂಬಲ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಭತ್ತ ಖರೀದಿಗೆ ಎಲ್ಲಾ ರೀತಿಯ ವ್ಯವಸ್ಥೆ ಮಾಡಿಕೊಳ್ಳುವಂತೆ ತಿಳಿಸಿದರು.
ರೈತರಿಂದ ಭತ್ತವನ್ನು ಖರೀದಿಸಲು ತೆರೆಯಲಾಗಿರುವ ಪ್ರತಿ ಖರೀದಿ ಕೇಂದ್ರಗಳಲ್ಲಿ ಕಡ್ಡಾಯವಾಗಿ ಕೃಷಿ ಇಲಾಖೆಯಿಂದ ಗ್ರೇಡರ್‌ಗಳನ್ನು ನೇಮಕ ಮಾಡಬೇಕು. ಮತ್ತು ಖರೀದಿ ಏಜೆನ್ಸಿಯ ಹಿರಿಯ ಅಧಿಕಾರಿಗಳು ತಮ್ಮ ಸಂಸ್ಥೆಗೆ ವಹಿಸಿರುವ ಜಿಲ್ಲೆಯಲ್ಲಿನ ಕಾರ್ಯಪ್ರಗತಿ ಬಗ್ಗೆ ಆಗಾಗ್ಗೆ ಮೇಲುಸ್ತುವಾರಿ ತಪಾಸಣೆ ಕೈಗೊಳ್ಳಬೇಕು ಎಂದು ತಿಳಿಸಿದರು.
ಭತ್ತವನ್ನು ಪ್ರತಿ ರೈತರಿಂದ ಉತ್ಪಾದನೆಗೆ ಅನುಗುಣವಾಗಿ ಪ್ರತಿ ಎಕರೆಗೆ 25 ಕ್ವಿಂಟಾಲ್‌ನಂತೆ ಗರಿಷ್ಟ 40 ಕ್ವಿಂಟಾಲ್‌ವರೆಗೆ ಮೀರದಂತೆ ಖರೀದಿಸಬೇಕು. ಸರ್ಕಾರ ನಿಗಧಿಪಡಿಸಿದ ಪ್ರಮಾಣವನ್ನು ಮೀರಿ ಹೆಚ್ಚುವರಿಯಾಗಿ ಭತ್ತವನ್ನು ಖರೀದಿಸುವಂತಿಲ್ಲ ಮತ್ತು ಭತ್ತವನ್ನು ಸರಬರಾಜು ಮಾಡಿದ ರೈತರಿಗೆ 15 ದಿನದೊಳಗಾಗಿ ಅವರ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಪಾವತಿ ಮಾಡಬೇಕು ಎಂದು ಸೂಚನೆ ನೀಡಿದರು.
ಈಗಾಗಲೇ ಸರ್ಕಾರದಿಂದ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಭತ್ತ ಖರೀದಿ ಮಾಡಿಕೊಳ್ಳಲು ದರ ನಿಗದಿಪಡಿಸಲಾಗಿದ್ದು, ಸಾಮಾನ್ಯ ಭತ್ತಕ್ಕೆ ಪ್ರತಿ ಕ್ವಿಂಟಾಲ್‌ಗೆ 2,183 ರೂ.ಗಳಷ್ಟು ನಿಗದಿಪಡಿಸಲಾಗಿದೆ. ಗ್ರೇಡ್ ಎ ಭತ್ತಕ್ಕೆ ಸರ್ಕಾರದಿಂದ 2,203 ರೂ. ಗಳನ್ನು ನಿಗದಿಪಡಿಸಲಾಗಿದೆ ಎಂದು ತಿಳಿಸಿದರು.
ಜಿಲ್ಲೆಯಲ್ಲಿ ರೈತರಿಂದ ಭತ್ತ ಖರೀದಿಸಲು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳವನ್ನು ಸಂಗ್ರಹಣಾ ಏಜೆನ್ಸಿಗಳನ್ನಾಗಿ ನೇಮಿಸಲಾಗಿದ್ದು, ಖರೀದಿ ಏಜೆನ್ಸಿಗಳು ವ್ಯವಸ್ಥಿತವಾಗಿ ಖರೀದಿ ಪ್ರಕ್ರಿಯೆಗಳನ್ನು ಕೈಗೊಂಡು, ಖರೀದಿಸಿದ ಭತ್ತವನ್ನು ಗೋದಾಮುಗಳಲ್ಲಿ ಸಂಗ್ರಹಿಸಿ ಹಲ್ಲಿಂಗ್‌ಗಾಗಿ ಹತ್ತಿರದ ಅಕ್ಕಿಗಿರಿಣಿಗಳಿಗೆ ಸಾಗಾನಿಕೆ ಮಾಡಬೇಕು ಎಂದರು.
ಭತ್ತ ಖರೀದಿ ಕೇಂದ್ರಗಳಲ್ಲಿ ರೈತರ ನೊಂದಣಿ ನ.15ರಿಂದ ಆರಂಭವಾಗುವುದು. ನಂತರ ನೊಂದಾಯಿತ ರೈತರಿಂದ ಡಿ.01ರಿಂದ ಮಾ.311ರವರೆಗೆ ಭತ್ತವನ್ನು ಖರೀದಿಸಿ ಮಿಲ್‌ಗಳಲ್ಲಿ ಶೇಖರಿಸುವ ಮತ್ತು ಪರಿವರ್ತಿಸುವ ಕಾರ್ಯಾರಂಭ ಮತ್ತು ಮುಕ್ತಾಯ ಪ್ರಕ್ರಿಯೆಯನ್ನು ನಿಯಮಾನುಸಾರವಾಗಿ ನಡೆಸಬೇಕು ಎಂದು ತಿಳಿಸಿದರು.
ಈ ಸಂದರ್ಭದಲ್ಲ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕ ಕೃಷ್ಣಾ ಶಾವಂತಗೇರಾ, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳದ ಅಧಿಕಾರಿ ವೆಂಕಟೇಶ, ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯ ಅಧಿಕಾರಿ ಮಹ್ಮದ್ ಜಿಲಾನಿ, ಅಕ್ಕಿ ಗಿರಿಣಿ ಮಾಲೀಕರ ಸಂಘದ ಮುಖ್ಯಸ್ಥರಾದ ಸಾವಿತ್ರಿ ಪುರುಷೋತ್ತಮ, ಕೃಷಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಂವಿಧಾನದ ಆಶಯಗಳು ಎಲ್ಲರ ಮನೆ-ಮಾತಾಗಲಿ

## ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಟಿ.ಎಂ ಭಾಸ್ಕರ್ ಹೇಳಿಕೆ



**ಹಂಪಿ ಟೈಮ್ಸ್ ಬಳ್ಳಾರಿ**
ಸಂವಿಧಾನ ಓದು ಕಾರ್ಯಕ್ರಮವು ನೈಜ ಸ್ವರೂಪ ಪಡೆದು, ಇಂದು ರಾಷ್ಟ್ರದ ಮತ್ತು ರಾಜ್ಯದ ಮನೆಮಾತಾಗಿದೆ ಎಂದು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಟಿ.ಎಂ ಭಾಸ್ಕರ್ ಅವರು ಹೇಳಿದರು.
ಇಲ್ಲಿನ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಡಾ.ಬಿ.ಆರ್.ಅಂಬೇಡ್ಕರ್ ಸಭಾಂಗಣದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಷ್ಟ್ರೀಯ ಸೇವಾ ಯೋಜನೆ ಕೋಶ ಬೆಂಗಳೂರು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲ ಯದ ರಾಷ್ಟ್ರೀಯ ಸೇವಾ ಯೋಜನೆ ಕೋಶ ಹಾಗೂ ಗೊಟಗೋಡಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಕೋಶ ಇವರುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ "ಸಂವಿಧಾನ ಓದು" ವಿಶ್ವವಿದ್ಯಾಲಯ ಮಟ್ಟದ ಒಂದು ದಿನದ ಕಾರ್ಯಗಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

> **"ಸಂವಿಧಾನ ಓದು" ವಿಶ್ವವಿದ್ಯಾಲಯ ಮಟ್ಟದ ಒಂದು ದಿನದ ಕಾರ್ಯಗಾರ**

ಸಂವಿಧಾನ ಆಶಯಗಳನ್ನು ಪರಿಣಾಮ ಕಾರಿಯಾಗಿ ಅರ್ಥೈಸಿ ಕೊಂಡು ಪಾಲಿಸಿದರೆ ಸಮ ಸಮಾಜ ನಿರ್ಮಾಣ ಸಾಧ್ಯವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಸಂವಿಧಾನ ಜಾರಿಯಾದ ಬಳಿಕ ಭಾರತದಲ್ಲಿ ಅಧಿಕೃತವಾಗಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಾಯಿತು ಎಂದು ನೆನಪಿಸಿಕೊಂಡರು.
ವಿವಿಯ ಕುಲಪತಿ ಪ್ರೊ.ಸಾಹೇಬ್ ಅಲಿ ನಿರಗುಡಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂವಿಧಾನ ಎಂದರೆ ಹಕ್ಕುಗಳು, ಕರ್ತವ್ಯಗಳು, ತತ್ವಗಳು ಮತ್ತು ಕಾನೂನಿನ ಮೂಲಕ ಪ್ರಜಾ ಪ್ರಭುತ್ವದ ಆಶಯವನ್ನು ಎತ್ತಿ ಹಿಡಿಯುವ ಪವಿತ್ರ ಗ್ರಂಥವಾಗಿದೆ ಎಂದು ಹೇಳಿದರು.
ವಿಶ್ವವಿದ್ಯಾಲಯದ ಕುಲಸಚಿವ ರುದ್ರೇಶ್.ಎಸ್. ಎನ್ ಅವರು ಮಾತನಾಡಿ, ಸಂವಿಧಾನ ಮಹತ್ವ ತಿಳಿದುಕೊಂಡರೆ ಮಾತ್ರ ಭವ್ಯವಾದ ರಾಜ್ಯ ನಿರ್ಮಿಸಲು ಸಾಧ್ಯ ಎಂದು ಹೇಳಿದರು.
ಸಂವಿಧಾನ ರಚನೆಯಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಸಂಪೂರ್ಣವಾಗಿ ತಲ್ಲಿನರಾಗಿ ರಕ್ತಪಾತವಿಲ್ಲದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳನ್ನು ತರುವ ವ್ಯವಸ್ಥೆಯನ್ನು ನಿರ್ಮಾಣ ಮಾಡಿದ್ದಾರೆ. ಇಂಥ ಮಹತ್ವದ ದಿನದ ಸಂದರ್ಭದಲ್ಲಿ ಸಂವಿಧಾನ ಪೀಠಿಕೆ, ಸಾಮರಸ್ಯ ಹಾಗೂ ಸಮಾನತೆಯ ಕುರಿತು ಅರಿತುಕೊಳ್ಳುವುದು ಅತಿ ಮುಖ್ಯ ಎಂದು ತಿಳಿಸಿದರು.
ವಿವಿಯ ಕುಲಸಚಿವರು (ಮೌಲ್ಯಮಾಪನ) ಪ್ರೊ. ರಮೇಶ್ ಓಲೇಕಾರ್ ಸಂವಿಧಾನ ಪೀಠಿಕೆ ಬೋಧಿಸಿದರು.
ಈ ಸಂದರ್ಭದಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಂಶೋಧನಾ ಅಧಿಕಾರಿ ಡಾ.ಮಲ್ಲಿಕಾರ್ಜುನ ಮಾನ್ಪಡೆ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಸಿ.ಟಿ ಗುರುಪ್ರಸಾದ್, ರಾಷ್ಟ್ರೀಯ ಸೇವಾ ಯೋಜನೆ ಕೋಶ ಪ್ರಾದೇಶಿಕ ನಿರ್ದೇಶನಾಲಯ, ಬೆಂಗಳೂರು ಯುವ ಅಧಿಕಾರಿ ವೈ.ಎಂ ಉಪ್ಪಿನ್, ವಿತ್ತಾಧಿಕಾರಿ ಪ್ರೊ.ಸದ್ಯೋಜಾತಪ್ಪ, ರಾಷ್ಟ್ರೀಯ ಸೇವಾ ಯೋಜನೆ ಕೋಶ ಸಂಯೋಜನಾಧಿಕಾರಿ ಡಾ.ಕುಮಾರ್, ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಸಂಯೋಜಕರು, ಬೋಧಕರು, ಸಂಶೋಧನಾ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.




# ಪ್ರಶ್ನಿಸುವ ಜಾಣ್ಮೆ ಮಕ್ಕಳಲ್ಲಿ ಬೆಳೆಸಿ

■ ಹಂಪಿ ಟೈಮ್ಸ್ ಬಳ್ಳಾರಿ

ಬಾಲ್ಯದಲ್ಲಿಯೇ ಸಂವಿಧಾನ, ಪ್ರಜಾಪ್ರಭುತ್ವ, ನಾಯಕತ್ವವನ್ನು ಅರಿತುಕೊಳ್ಳುವುದು ಮತ್ತು ವ್ಯವಸ್ಥೆಯನ್ನು ಪ್ರಶ್ನಿಸುವದನ್ನು ಇಂದಿನ ಮಕ್ಕಳಿಗೆ ಕಲಿಸುವ ಅವಶ್ಯಕತೆ ಇದೆ, ಮಕ್ಕಳು ತಮ್ಮ ಹಕ್ಕುಗಳನ್ನು ಪ್ರಶ್ನಿಸುವ ಪ್ರಯತ್ನಗಳನ್ನು ಮಾಡಬೇಕು ಎಂದು ಬಳ್ಳಾರಿ ತಾಲ್ಲೂಕು ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಡಗಿನ ಬಸಪ್ಪ ಅವರು ಹೇಳಿದರು.

ನಗರದ ಬಿಡಿಡಿಎಸ್ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಮಕ್ಕಳ ಸಂಸತ್-2023 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿವಿಧ ತಾಲೂಕಿನ ಗ್ರಾಮೀಣಾ ಭಾಗದಿಂದ ಮಕ್ಕಳು ಈ ಸಂಸತ್ ಸಭೆಯಲ್ಲಿ ಭಾಗವಹಿಸುತ್ತಿರುವುದು ಖುಷಿಯ ವಿಚಾರ, ಮಕ್ಕಳು ಭಾಗವಹಿಸುವಿಕೆ ಹಾಗೂ ಪ್ರಶ್ನಿಸುವಿಕೆಗೆ ಇದೊಂದು ಉತ್ತಮ ಅವಕಾಶವಾಗಿದೆ ಎಂದು ಅಭಿಪ್ರಾಯ ಪಟ್ಟರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಸದಸ್ಯ ಹೆಚ್.ಸಿ ರಾಘವೇಂದ್ರ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಈ ತಿಂಗಳಲ್ಲಿ ರಾಜ್ಯ ಮಟ್ಟದಲ್ಲಿ ಆಯೋಜಿಸುವ ರಾಜ್ಯ ಮಕ್ಕಳ ಸಂಸತ್‌ಗೆ ರಾಜ್ಯದ ಮುಖ್ಯಮಂತ್ರಿಗಳನ್ನು ಆಹ್ವಾನಿಸಿ, ಅಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಕ್ಕಳು ಭಾಗವಹಿಸಿ ತಮ್ಮ ಅಹವಾಲು, ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ರಾಜ್ಯದ ಮುಖ್ಯಮಂತಿಗಳ ಜೊತೆ ಸಂವಾದ ಏರ್ಪಡಿಸುವ ಉದ್ದೇಶದಿಂದ ಈ ಸಂಸತ್‌ನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಈಗಾಗಲೇ 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಮಕ್ಕಳ ಸಂಸತ್ ಆಯೋಜಿಸಿ ರಾಜ್ಯ ಮಟ್ಟದ



ಆಯೋಜನೆಗೆ ಪೂರ್ವ ತಯಾರಿ ಆರಂಭಿಸಲಾಗಿದೆ ಎಂದರು.

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷೆ ವಿಜಯಲಕ್ಷ್ಮಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಎಲ್ಲಾ ತಾಲೂಕುಗಳಿಂದ ಮಕ್ಕಳ ಹಕ್ಕುಗಳ ಸಂಘದಿಂದ ಮಕ್ಕಳ ಪ್ರತಿನಿಧಿಗಳು ಆಗಮಿಸಿರುವುದು ಉತ್ತಮ ಬೆಳವಣಿಗೆಯಾಗಿದೆ. ಮಕ್ಕಳು ತಮ್ಮ ಅಹವಾಲುಗಳನ್ನು ನಿರ್ಭೀತಿಯಿಂದ ಮಂಡಿಸಿ, ಹಕ್ಕುಗಳ ಉಲ್ಲಂಘನೆಯಾಗದಂತೆ ಸದಾ ಜಾಗೃತಿಯಿಂದ ಇರಬೇಕು. ನಿಮ್ಮ ಸಹಾಯಕ್ಕಿರುವ ಮಕ್ಕಳ ಸಹಾಯವಾಣಿ 1098 ಮತ್ತು ಪೊಲೀಸ್ ಸಹಾಯವಾಣಿ 112 ಬಳಸಲು ಕರೆ ನೀಡಿದರು.

ಮಕ್ಕಳ ಸಂಸತ್‌ನಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ ಚನ್ನಬಸಪ್ಪ, ಸ್ಥಳೀಯ ವರ್ಲ್ಡ್ ವಿಷನ್ ಸಂಸ್ಥೆಯ ಪ್ರೇಮಲತಾ, ರೀಡ್ಸ್ ಸಂಸ್ಥೆಯ ತಿಪ್ಪೇಶಪ್ಪ , ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಸ್ವಸಹಾಯಸಂಘ(ರಿ)ನ ಪ್ರತಿನಿಧಿ ಶ್ವೇತಾ ಹಾಗೂ ಜಿಲ್ಲೆಯ ವಿವಿಧ ತಾಲೂಕಿನಿಂದ 56 ಕ್ಕೂ ಹೆಚ್ಚು ಮಕ್ಕಳು ಪಾಲ್ಗೊಂಡಿದ್ದರು. ಚಿಕ್ಕ ಮಕ್ಕಳಿಂದ ಬಂದ ದೊಡ್ಡ ದೊಡ್ಡ ಪ್ರಶ್ನೆಗಳು ನೋಡುಗರಲ್ಲಿ ಆಶ್ಚರ್ಯ ಮೂಡಿಸಿದವು.

### ಚಿಕ್ಕ ಮಕ್ಕಳು-ದೊಡ್ಡ ಪ್ರಶ್ನೆಗಳು

ಮಕ್ಕಳು ಸಂಸತ್ತಿನ ಚರ್ಚೆಯಲ್ಲಿ ಸುದೀರ್ಘ 3 ಗಂಟೆಗಳ ಕಾಲ ಭಾಗವಹಿಸಿ, ಮಕ್ಕಳ ಹಕ್ಕುಗಳ ಉಲ್ಲಂಘನೆ ಮತ್ತು ಮಕ್ಕಳ ದೌರ್ಜನ್ಯ ಪ್ರಕರಣಗಳು, ಹವಾಮಾನ ವೈಪರಿತ್ಯದಿಂದ ಮಕ್ಕಳ ಮೇಲಾಗುವ ಪರಿಣಾಮಗಳು ಸೇರಿದಂತೆ ಮಕ್ಕಳ ಆರೋಗ್ಯ, ಕೋವಿಡ್ ನಂತರ ಮಕ್ಕಳು ಶಿಕ್ಷಣ ಕ್ಷೇತ್ರದಲ್ಲಿ ಎದುರಿಸುತ್ತಿರುವ ಸವಾಲುಗಳು ಮತ್ತು ಮಕ್ಕಳ ಅಪೌಷ್ಠಿಕತೆ ಕೊನೆಗಾಣಿಸುವುದು ಕುರಿತು ವಿಸ್ತೃತ ಚರ್ಚೆ ನಡೆಸಿದರು.

### ವಿಜೇತರು

ಇಂದು ನಡೆದ ಜಿಲ್ಲಾ ಮಟ್ಟದ ಮಕ್ಕಳ ಸಂಸತ್‌ನಲ್ಲಿ ಬಳ್ಳಾರಿ ಜಿಲ್ಲೆಯಿಂದ ರಾಜ್ಯ ಮಟ್ಟದ ಮಕ್ಕಳ ಸಂಸತ್‌ಗೆ ಸಿರುಗುಪ್ಪ ತಾಲೂಕಿನ ರಾರಾವಿ ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿಯ ಸಿ.ಶಾಂತಿ ಹಾಗೂ ಬಳ್ಳಾರಿ ತಾಲೂಕಿನ ಬಸರಕೋಡು ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿಯ ವಿದ್ಯಾರ್ಥಿ ಡಿ.ಮಹಾಂತೇಶ್ ಆಯ್ಕೆಯಾಗಿದ್ದಾರೆ.

### ಹಿನ್ನಲೆ

ಕರ್ನಾಟಕದ ವಿವಿಧ ಭಾಗಗಳಲ್ಲಿರುವ ಮಕ್ಕಳ ಸಮಸ್ಯೆಗಳೇನು? ಮಕ್ಕಳ ನಿಜವಾದ ಬೇಡಿಕೆಗಳೇನು? ಮಕ್ಕಳ ಸಮಸ್ಯೆ, ಬೇಡಿಕೆಗಳನ್ನು ಸರ್ಕಾರ ತುರ್ತಾಗಿ ಪರಿಶೀಲಿಸಬೇಕಾಗಿದೆ? ಇವೇ ಮೊದಲಾದ ವಿಚಾರಗಳ ಕುರಿತು ಮಕ್ಕಳೊಡನೆ ಸಮಾಲೋಚಿಸಿ ಮಕ್ಕಳೇ ಅವರನ್ನು ಕಾಡುತ್ತಿರುವ ಸಮಸ್ಯೆಗಳನ್ನು ಗುರುತಿಸಿ ಮಾಡಿದ ಪಟ್ಟಿಯನ್ನು ಸರ್ಕಾರಕ್ಕೆ ತಲುಪಿಸಿ, ಮಕ್ಕಳ ಸಮಸ್ಯೆಗಳಿಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಚರ್ಚಿಸಿ, ಆಗ್ರಹಿಸಲು ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರವು "ರಾಜ್ಯ ಮಟ್ಟದ ಮಕ್ಕಳ ಹಕ್ಕುಗಳ ಸಂಸತ್" ಹಾಗೂ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಮಕ್ಕಳ ಸಮಾಲೋಚನೆಯನ್ನು ರಾಜ್ಯಮಟ್ಟದಲ್ಲಿ ಆಯೋಜಿಸುತ್ತಿದೆ.

ಜಿಲ್ಲಾ ಮಟ್ಟದ ಮಕ್ಕಳ ಸಂಸತ್-23, ಈ ಹಿನ್ನೆಲೆಯಲ್ಲಿ ನಮ್ಮ ಬಳ್ಳಾರಿ ಜಿಲ್ಲೆಯಿಂದ ಇಬ್ಬರು ಮಕ್ಕಳನ್ನು ಜಿಲ್ಲಾ ಪ್ರತಿನಿಧಿಗಳನ್ನಾಗಿ ಆಯ್ಕೆ ಮಾಡಿ ರಾಜ್ಯ ಮಟ್ಟಕ್ಕೆ ಕಳುಹಿಬೇಕಾಗಿದೆ. ಇದರ ಪೂರ್ವಭಾವಿ ಸಭೆಯಲ್ಲಿಂದು 5 ತಾಲೂಕಿನಿಂದ ಆಗಮಿಸಿದ ಮಕ್ಕಳ ಪ್ರತಿನಿಧಿಗಳ ಸಮಾನ ಮನಸ್ಕರ ಗುಂಪು ಇಬ್ಬರನ್ನು ಆಯ್ಕೆಮಾಡಲಾಯಿತು.

# ಸಂಗೀತವು ಥೆರಪಿಯಿಂದ ಮಾನಸಿಕ ಆರೋಗ್ಯ ವೃದ್ಧಿ

■ ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ

ಸಂಗೀತಕ್ಕೆ ನೋವು, ದುಃಖ,ಆತಂಕ,ಖಿನ್ನತೆಯನ್ನು ಮರೆಸುವ ಶಕ್ತಿ ಇದೆ ಎಂದು ಲೆಕ್ಕಪರಿಶೋಧಕ ಡಿ.ವಿಶ್ವನಾಥ ಹೇಳಿದರು.ಅವರು ಪಟ್ಟಣದ ಶ್ರೀಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ, ವಿಜಯನಗರ ಜಿಲ್ಲಾ ಕನ್ನಡಮತ್ತುಸಂಸ್ಕೃತಿ ಇಲಾಖೆಯ ನೆರವಿನೊಂದಿಗೆ, ಪಂಡಿತ ಶ್ರೀ ಪುಟ್ಟರಾಜಗವಾಯಿಗಳ ಸಾಂಸ್ಕೃತಿಕ ಮತ್ತು ಸಮಾಜಸೇವಾ ಚಾರಿಟಬಲ್ ಟ್ರಸ್ಟಿನಿಂದ ಹಮ್ಮಿಕೊಂಡ ಸಮೂಹನೃತ್ಯ ಮತ್ತು ಸುಗಮಸಂಗೀತ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಮಾನಸಿಕ ಆರೋಗ್ಯ ವೃದ್ಧಿಗೆ ಸಂಗೀತವು ಒಂದು ಥೆರಪಿಯಂತೆ ಕೆಲಸ ಮಾಡುತ್ತದೆ ಎಂದರೆ ತಪ್ಪಾಗಕ್ಕಿಲ್ಲ. ಸಂಗೀತಕ್ಕೆ ಎಲ್ಲವನ್ನೂ ಮರೆಸಿ ತನ್ನೊಳಗೆ ಸೆಳೆದುಕೊಳ್ಳುವ ಆಯಸ್ಕಾಂತದಂತಹ ಶಕ್ತಿ ಇದೆ. ಇದು ಮನಸ್ಸಿಗೆ ಚೈತನ್ಯ ನೀಡಿ, ಮನಸ್ಸನ್ನು ಶಾಂತಗೊಳಿಸುತ್ತದೆ ಎಂದರು. ಅರ್ಚಕ



ರಾಮಣ್ಣಪೂಜಾರ ಸಭೆಯ ಅಧ್ಯಕ್ಷತೆವಹಿಸಿದ್ದರು. ದೇವಸ್ಥಾನಮಾಳಿಗೆ ವರ್ತಕರಸಂಘದ ಅಧ್ಯಕ್ಷ ಪಿ. ಮುಕ್ಕುಂದ,ಕಲಾವಿದ ಸಂತೋಷಚಂದುಕರ್,ಬ್ಯಾಲ ಕುಂದಿಯ ರಂಗಕಲಾವಿದ ಮೃತ್ಯಂಜಯಗೌಡ, ರಾಜೇಶ್ ಉಪಸ್ಥಿತರಿದ್ದರು.ಇದೇ ಸಂಧರ್ಭದಲ್ಲಿ ಚಮದ್ರಕಾಂತ ಎಫ್.ಬಕನಿಂಗಿರವರಿಂದ ಸುಗಮಸ ಂಗೀತ,ಆನಂದನಹಳ್ಳಿಯ ಕೊಟ್ರೇಶ ಹೆಚ್.ಅಡವಿ ಇವರಿಂದ ಸಮೂಹನೃತ್ಯಗಳು ಪ್ರದರ್ಶನಗೊಂಡವು.

# ಸಿಡಿಲಿಗೆ 36 ಕುರಿಗಳು ಸಾವು



■ ಹಂಪಿ ಟೈಮ್ಸ್ ಹರಪನಹಳ್ಳಿ

ತಾಲೂಕಿನ ಗಡಿಗುಡಾಳು ಗ್ರಾಮದ ಹೊಲದಲ್ಲಿ ಸೋಮವಾರ ಮಧ್ಯಾಹ್ನ ಸುಮಾರು 2 ಗಂಟೆಗೆ ಸಿಡಿಲು ಬಡಿದು 36 ಕುರಿಗಳು ಸಾವನ್ನಪ್ಪಿವೆ. ಮೂಗಪ್ಪ ಮೈಲಪ್ಪ ಹನುಮಂತಪ್ಪ ಚಂದ್ರಪ್ಪ ಪರಸಪ್ಪ ಬಸಪ್ಪ ಹನುಮಂತಪ್ಪ ಪರುಸಪ್ಪ ರಾಜ ಸಾಬ್ ಹನೀಫ್ ಖಾನ್ ಸೈಫುಲ್ಲ ವಿಷ್ಣು ಸಾಬ್ ರೇಣುಕಮ್ಮ ನಿಂಗರಾಜ್ ನಾಗರಾಜ್ ರೇಣುಕಮ್ಮ, ಶಾರದಮ್ಮ ಇವರಗೆ ಸಂಬಂಧಿಸಿದ ಒಟ್ಟು 30. ಆಡುಗಳು, 1 ಕುರಿ ಸಿಡಿಲು ಬಡಿದು ಸಾವನ್ನಪ್ಪಿದ ಘಟನೆ ನಡೆದಿದೆ

ಹಾನಿಯಾದ ಕುರಿಗಳಿಗೆ ಸರ್ಕಾರ ದಿಂದ ಪರಿಹಾರ ನೀಡುವಂತೆ ಸ್ಥಳೀಯರು ಹಾಗೂ ಕುರಿಗಾಯಿ ಕುಟುಂಬ ಮನವಿ ಮಾಡಿದೆ ಸ್ಥಳಕ್ಕೆ ಅರಸಿಕೆರಿ ಪಿಎಸ್ಐ ಎ ಕಿರಣ್ ಕುಮಾರ್ ಪಶು ವೈದ್ಯಾಧಿಕಾರಿ ನಾಗರಾಜ್ ಗ್ರಾಮ ಪಂಚಾಯಿತಿ ಅಧಿಕಾರಿಗಳು ಹಾಗೂ ಸದಸ್ಯರು ಕಂದಾಯ ಅಧಿಕಾರಿ ಮಂಜುನಾಥ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು ಅರಸಿಕೆರೆ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ

# ಮಾಜಿ ಅರೆ ಸೇನಾಪಡೆಯಾ ಯೋಧರಿಗೆ ತಾತ್ಕಾಲಿಕ ಕೊಠಡಿ ಮಂಜೂರು



■ ಹಂಪಿ ಟೈಮ್ಸ್ ಹರಪನಹಳ್ಳಿ

ಭಾನುವಾರ ಬೆಳಗ್ಗೆ ತಾಲೂಕಿನ ಪಂಚಾಯತ್ ಕಚೇರಿಯ ಮೇಲ್ಭಾಗದಲ್ಲಿ ಒಂದು ಕೊಠಡಿ ಯನ್ನು ತಾಲೂಕಿನ ಜನಪ್ರಿಯ ಶಾಸಕರಾದ ಎಂಪಿ ಲತಾ ಮಲ್ಲಿಕಾರ್ಜುನ್ ರವರ ಮೇರೆಗೆ ಒಂದು ತಾತ್ಕಾಲಿಕ ಕೊಠಡಿಯನ್ನು ಮಾಜಿ ಅರೆ ಸೇನಾಪಡೆಯ ಯೋಧರಿಗಾಗಿ ಮಂಜೂರು ಮಾಡಿಸಿರುತ್ತಾರೆ. ಅ ಕೊಠಡಿಯನ್ನು ತಾಲೂಕಿನ ಎಲ್ಲಾ ಮಾಜಿ ಅರೆ ಸೇನಾಪಡೆಯ ಯೋಧರು ಸೇರಿ ಪೂಜೆ ನೆರೆವೇರಿಸಿದರು.

ಈ ಸಂದರ್ಭದಲ್ಲಿ ಮಾಜಿ ಅರೆಸೇನಾಪಡೆಯ ಗೌರವ ಅಧ್ಯಕ್ಷರು ಎ ಆನಂದಪ್ಪ ಅಧ್ಯಕ್ಷರು ರಾಜ ಪೂಜಾರ್ ಕಾರ್ಯದರ್ಶಿ ರವಿ ನಾಯಕ್ ಸದಸ್ಯರು ಮುಜುಬು ರೆಹಮಾನ್, ಬಿ ಎಂ ಆನಂದ್ ರಾವ್, ಚೆನ್ನಬಸಪ್ಪ, ಸೋಮಶೇಖರ್, ಎಸ್ ವಿ ನಾಯಕ್, ಮೇಘರಾಜ್, ರಮೇಶ್ ಕೂಡ್ಲಿಗಿ. ಅಜ್ಜಪ್ಪ ಬಿ, ಜಗದೀಶ್ ಮುಂತಾದವರು ಉಪಸ್ಥಿತರಿದ್ದರು.

# ಕೃಷಿ ಹೊಂಡ ನಿರ್ಮಾಣಕ್ಕೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಕೃಷಿ ಇಲಾಖೆ ವತಿಯಿಂದ 2023-24ನೇ ಸಾಲಿನ ಬಳ್ಳಾರಿ ತಾಲ್ಲೂಕು ಮತ್ತು ಕುರುಗೋಡು ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಶೇ.50 ಸಹಾಯಧನದಲ್ಲಿ ಕೃಷಿ ಹೊಂಡ ನಿರ್ಮಿಸಿಕೊಳ್ಳಲು ಆಸಕ್ತ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ದಯಾನಂದ ಅವರು ತಿಳಿಸಿದ್ದಾರೆ.

ಕೃಷಿ ಹೊಂಡ ನಿರ್ಮಾಣದಿಂದ ಕೃಷಿಗೆ ಅಗತ್ಯ ಪ್ರಮಾಣದ ನೀರು ಸಂಗ್ರಹಿಸುವ ಜತೆಗೆ ಅಂತರ್ಜಲ ಅಭಿವೃದ್ಧಿಗೆ ಸಹಕಾರಿಯಾಗುವುದು ಹಾಗೂ ಖುಷ್ಕಿ ಭೂಮಿಯ ರೈತರಿಗೆ ಬೆಳೆ ಸಂದಿಗ್ಧ ಪರಿಸ್ಥಿತಿಯಲ್ಲಿ ನೀರಿನ ಕೊರತೆ ನೀಗಿಸಿ ಉತ್ತಮ ಬೆಳೆ ಕಾಪಾಡಿ ರೈತರು ಆರ್ಥಿಕ ಅಭಿವೃದ್ಧಿ ಹೊಂದಲು ಈ ಯೋಜನೆಯು ಉದ್ದೇಶವಾಗಿದೆ.


21*21*3 ಮೀ. ಅಳತೆಯ ಕೃಷಿ ಹೊಂಡ ನಿರ್ಮಿಸಿಕೊಂಡಲ್ಲಿ ಕೆಂಪು ಮಣ್ಣಿಗೆ ರೂ.52 ಸಾವಿರ ಮತ್ತು ಕಪ್ಪು ಮಣ್ಣಿಗೆ ರೂ.45ಸಾವಿರಗಳನ್ನು ಇಲಾಖೆಯಿಂದ ಸಹಾಯಧನವಾಗಿ ನೀಡಲಾಗುವುದು. ಆಸಕ್ತ ರೈತರು ಆಯಾ ಹೋಬಳಿ ರೈತ ಸಂಪರ್ಕ ಕೇಂದ್ರದಲ್ಲಿ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕರ ಮೊ.8722934294, ಬಳ್ಳಾರಿ ರೈತ ಸಂಪರ್ಕ ಕೇಂದ್ರ ಮೊ.8277930411, ರೂಪನಗುಡಿ ರೈತ ಸಂಪರ್ಕ ಕೇಂದ್ರ ಮೊ.8277930425, ಮೋಕಾ ರೈತ ಸಂಪರ್ಕ ಕೇಂದ್ರ ಮೊ.8277934297, ಕುರುಗೋಡು ರೈತ ಸಂಪರ್ಕ ಕೇಂದ್ರ ಮೊ.8277934300, ಕೋಳೂರು ರೈತ ಸಂಪರ್ಕ ಕೇಂದ್ರ ಮೊ.6360645255 ಹಾಗೂ ಹೋಬಳಿ ಮಟ್ಟದ ಕೃಷಿ ಅಧಿಕಾರಿಗಳನ್ನು ಸಂಪರ್ಕಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.






## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 7-11-2023

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1604.07 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 10422 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 27.251 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.3 ಅಡಿ |
| ಒಳ ಹರಿವು | 6971 ಕ್ಯುಸೆಕ್ |
| ಹೊರ ಹರಿವು | 9982 ಕ್ಯುಸೆಕ್ |
| ಸಾಮರ್ಥ್ಯ | 102.978ಟಿಎಂಸಿ |







ಇ-ಪೇಪರ್ ಉಚಿತ
ಇಂದೇ ಹಂಪಿ ಟೈಮ್ಸ್ ವಾಟ್ಸ್ಪ್ ಚಾನಲ್ ಸೇರಿ, ಇ-ಪೇಪರ್ ಉಚಿತವಾಗಿ ಪಡೆಯಿರಿ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA